ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

**ಶ್ರೀ ಹೆಚ್. ವಿಶ್ವನಾಥ್ (ಸಹಕಾರ ಸಚಿವರು)**: ಮಾನ್ಯ ಛೇರ್ಮನ್‌ರವರೆ, "2004ನೇ ಸಾಲಿನ ಕರ್ನಾಟಕ ಮಿತಿಮೀರಿದ ಬಡ್ಡಿ ವಿಧಿಸುವಿಕೆಯ ನಿಷೇಧ ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ."

**ಛೇರ್ಮನ್**: ವಿಧೇಯಕವನ್ನು ಮಂಡಿಸಲಾಗಿದೆ. **ಅನುಬಂಧ II**

## 11. ವಿತ್ತೀಯ ಕಾರ್ಯಕಲಾಪಗಳು 2003-04ನೇ ಸಾಲಿನ ಆಯವ್ಯಯದ ಮೇಲಿನ ಚರ್ಚೆ (ಮುಂದು)

†**ಶ್ರೀ ಕೃಷ್ಣ ಬೈರೇಗೌಡ (ವೇಮಗಲ್)**: ಮಾನ್ಯ ಚೇರ್‌ಮನ್‌ರವರೇ, 2004-05ರ ಆಯವ್ಯಯದ ಬಗ್ಗೆ ಚರ್ಚೆ ಮಾಡಲಿಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನು ಸಲ್ಲಿಸುತ್ತಾ ಪ್ರಥಮವಾಗಿ ಈ ಆಯವ್ಯಯದಲ್ಲಿ ಮಂಡಿಸಿರತಕ್ಕಂತಹ ಒಂದು ಅಂಶವನ್ನು ಕೈಗೆತ್ತಿಕೊಳ್ಳುತ್ತಾ, ಈ ಅಂಶದ ಗಂಭೀರತೆಯನ್ನು ಒತ್ತಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಆಯವ್ಯಯದಲ್ಲಿ ಮಾನ್ಯ ಮುಖ್ಯಮಂತ್ರಿಗಳು ನಮ್ಮ ರಾಜ್ಯದಲ್ಲಿನ ಗ್ರಾಮೀಣ ಪ್ರದೇಶದ ಬಡ ರೈತಜನತೆಗೆ ಬರಗಾಲಕ್ಕೆ ಸಿಕ್ಕಿ ತತ್ತರಿಸುತ್ತಿರುವುದನ್ನು ಸೂಕ್ತವಾಗಿ ಗಮನಕ್ಕೆ ತೆಗೆದುಕೊಂಡು 31ನೇ ಮಾರ್ಚ್ 2003 ರವರೆಗೆ ಇದ್ದಂತಹ ವಿದ್ಯುತ್ ಬಾಕಿಯನ್ನು ಸಂಪೂರ್ಣವಾಗಿ ಮನ್ನಾ ಮಾಡಿದ್ದಾರೆ, ಅದನ್ನು ನಾನು ಕರ್ನಾಟಕ ರಾಜ್ಯದ ಸಮಸ್ತ ರೈತಾಪಿ ವರ್ಗದ ಪರವಾಗಿ ಸ್ವಾಗತಿಸಲಿಕ್ಕೆ ಇಚ್ಛಿಪಡುತ್ತೇನೆ. ಈ ರೀತಿ ಮನ್ನಾ ಮಾಡಿದ್ದರೂ ಸಹ ಇದು ಪ್ರಮುಖವಾದ ಪ್ರಶ್ನೆಯನ್ನು ಎತ್ತಿ ತೋರಿಸುತ್ತದೆ. ಏನೆಂದರೆ ಸದಾ ಕಾಲ ಯಾರು ಬಿಲ್ಲನ್ನು ಪಾವತಿ ಮಾಡದೆ ಬರುತ್ತಿದ್ದಾರೆ ಅವರಿಗೆ ಮಾತ್ರ ಸರ್ಕಾರ ಸಹಾಯ ಮಾಡುತ್ತಾ ಬಂದಿದೆ. ವಿದ್ಯುತ್ ಬಾಕಿಯನ್ನು ಮನ್ನಾ ಮಾಡುವುದಾಗಲೀ, ಅಥವಾ ಬ್ಯಾಂಕ್ ಸಾಲಗಳ ಮೇಲೆ ಇದ್ದಂತಹ ಬಡ್ಡಿಯನ್ನು ಮನ್ನಾ ಮಾಡುವುದಾಗಲೀ, ಯಾರು ಇದನ್ನು ಸತತವಾಗಿ ಪಾಲಿಸದೆ ಬರುತ್ತಿದ್ದಾರೆ ಅವರಿಗೆ ಸರ್ಕಾರ ಸದಾ ಕಾಲ ಅನುಕೂಲ ಮಾಡುತ್ತಾ ಬರುತ್ತಿದೆ. ಈ ರೀತಿ ಇದೇ ಸರ್ಕಾರ ಮಾಡುತ್ತಿಲ್ಲ, ಬಹುಶಃ ಹಿಂದಿನ ಸರ್ಕಾರಗಳು ಸಹ ಇದೇ ರೀತಿ ನಡೆದುಕೊಂಡು ಬರುತ್ತಿದೆ. ಏನು Chronic and wilful defaulters ಅಂತ ಕರೆಯುತ್ತೇವೆ ಅವರಿಗೆ ಮಾತ್ರ ಇದರಿಂದ ಅನುಕೂಲವಾಗಿದೆ, ಇದು ತಪ್ಪು, ನಾವೇ ಸರ್ಕಾರವನ್ನು ನಡೆಸುತ್ತಿದ್ದು, ನಾವೇ ಇಲ್ಲಿ ಕುಳಿತುಕೊಂಡು ಜನತೆಗೆ ಹೇಳಿ ಮಾಡಿಸಿದಂತಿದೆ, ನೀವು ಸದಾ ಕಾಲ ಬಿಲ್ ಕಟ್ಟಬೇಡಿ, ನಿಮಗೆ ನಾವು ಮನ್ನಾ ಮಾಡುತ್ತೇವೆಂದು. On the other hand, - ಯಾರು ಸಮಯಕ್ಕೆ ಸರಿಯಾಗಿ ಬಡ್ಡಿಯನ್ನು ಕಟ್ಟುತ್ತಾ ಬಂದಿದ್ದಾರೆ, ಹಣವನ್ನು ಪಾವತಿ ಮಾಡುತ್ತಿದ್ದಾರೆ, ಅಂಥವರಿಗೆ ಶಿಕ್ಷೆಯನ್ನು ವಿಧಿಸುತ್ತಿದ್ದೇವೆ. ನೀವು ಕಟ್ಟುತ್ತಾ ಬನ್ನಿ, ನಿಮಗೆ ಸರ್ಕಾರದಿಂದ ಏನೂ ಸಹಾಯ ಸಿಗುವುದಿಲ್ಲ. ಕಷ್ಟಪಟ್ಟು ಯಾರು ದುಡಿದು ತಮ್ಮ ಮರ್ಯಾದೆಯನ್ನು ಉಳಿಸಿಕೊಳ್ಳುವ ದೃಷ್ಟಿಯಿಂದ ವಿದ್ಯುತ್ ಬಿಲ್ಲನ್ನು ಪಾವತಿ ಮಾಡುತ್ತಾರೆ ಅಥವಾ ಬ್ಯಾಂಕ್ ಸಾಲದ ಹಣವನ್ನು ಸಮಯಕ್ಕೆ ಸರಿಯಾಗಿ ಪಾವತಿ ಮಾಡುತ್ತಾರೆ ಅವರಿಗೆ ಸರ್ಕಾರದಿಂದ ಸರಿಯಾಗಿ ನೆರವು ಸಿಗುತ್ತಿಲ್ಲ. ನಾವೇ ಈ wilful and Chronic defaultersಗೆ ಉತ್ತೇಜನವನ್ನು ಕೊಡುತ್ತಿದ್ದೇವೆ. ಇದನ್ನು ಸರ್ಕಾರ ಗಮನಕ್ಕೆ ತೆಗೆದುಕೊಂಡು ಯಾರೂ ಸರಿಯಾಗಿ ಹಣವನ್ನು ಪಾವತಿ ಮಾಡುತ್ತಾ ಬಂದಿದ್ದಾರೆ ಅವರಿಗೂ

(†ಈ ಚಿಹ್ನೆ ಮಾನ್ಯ ಸದಸ್ಯ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲವೆಂದು ಸೂಚಿಸುತ್ತದೆ)

ಸಹ ಇದರ ಸಹಾಯ ಸಿಗುವಂತಹ ಕ್ರಮವನ್ನು ತೆಗೆದುಕೊಳ್ಳಬೇಕು, ಏಕೆಂದರೆ ಈಗ ಪ್ರಾಮಾಣಿಕವಾಗಿ ಹಣ ಪಾವತಿಸುವವರಿಗೂ ಸಹ ಇವತ್ತಲ್ಲ, ನಾಳೆ ಸರ್ಕಾರ ಮನ್ನಾ ಮಾಡುತ್ತದೆ, ಆದ್ದರಿಂದ ಏತಕ್ಕೆ ಹಣವನ್ನು ಪಾವತಿಸಬೇಕು ಎನ್ನುವ ಯೋಚನೆ ಬರುತ್ತದೆ. ಹಾಗಾಗಿ ಈ ರೀತಿ ಯೋಚನೆ ಮಾಡಲಿಕ್ಕೆ ಸರ್ಕಾರ ದಾರಿ ಮಾಡಿ ಕೊಡದೆ ಯಾರು ಸಮಯಕ್ಕೆ ಸರಿಯಾಗಿ ಹಣ ಪಾವತಿಸುತ್ತಾ ಬರುತ್ತಿದ್ದಾರೆ ಅವರಿಗೂ ಸಹ ಸರ್ಕಾರ ಅನುಕೂಲ ಮಾಡಿಕೊಡಬೇಕಾಗುತ್ತದೆ. ಈ ದಿಶೆಯಲ್ಲಿ ಕನಿಷ್ಠ ಪಕ್ಷ ಏನು 31–3–2003 ಎಂದು ದಿನಾಂಕವನ್ನು ನಿಗದಿಪಡಿಸಿದ್ದಾರೆ ಅದರ ಬದಲಾಗಿ 31ನೇ ಡಿಸೆಂಬರ್ 2003 ರವರೆಗೆ ಮಾಡಿದರೆ ಸಂಪೂರ್ಣವಾಗಿ ಕಟ್ಟಿಲ್ಲ ಅವರಿಗೂ ಸಹ ಇದರಿಂದ ಸಹಾಯ ದೊರಕುತ್ತದೆ. ಈ ರೀತಿಯಲ್ಲಿ ಸರ್ಕಾರವು ಮನಸ್ಸು ಮಾಡಿ ಎಲ್ಲಾ ಜನತೆಗೆ, ಯಾರೂ ಡಿಫಾಲ್ಟರ್ಸ್ ಇರುತ್ತಾರೆ, ಅವರಿಗೆ ಮಾತ್ರವಲ್ಲ, ಯಾರು ಸಮಯಕ್ಕೆ ಸರಿಯಾಗಿ ಹಣ ಪಾವತಿಸುತ್ತಾ ಬಂದಿದ್ದಾರೆ, ಅವರಿಗೂ ಸಹ ಸಹಾಯವಾಗಬೇಕೆನ್ನುವ ಉದ್ದೇಶದಿಂದ 31ನೇ ಡಿಸೆಂಬರ್ 2003ರ ವರೆಗೆ ಇರುವ ವಿದ್ಯುತ್ ಬಾಕಿಯನ್ನು ಮನ್ನಾ ಮಾಡಬೇಕೆಂದು ಸರ್ಕಾರದಲ್ಲಿ ತಮ್ಮ ಮೂಲಕ ಮನವಿ ಮಾಡಲಿಚ್ಚಿಸುತ್ತೇನೆ. ಗ್ರಾಮೀಣ ಪ್ರದೇಶದಲ್ಲಿರತಕ್ಕಂತಹ ಮತ್ತೊಂದು ಬರಗಾಲಕ್ಕೆ ಸಿಕ್ಕಿರುವ ಸಮಸ್ಯೆ ನೀರಾವರಿ ಕೊರತೆ ಅದು ನಮ್ಮ ಕೋಲಾರ ಜಿಲ್ಲೆಯಲ್ಲಿ ಶಾಶ್ವತವಾಗಿ ನೀರಾವರಿ ಯೋಜನೆಗಳು ಇಲ್ಲದಿರುವುದು ತಮಗೆಲ್ಲಾ ತಿಳಿದಿರುವ ವಿಷಯ. ಹಾಗಾಗಿ ನಮ್ಮ ಕೋಲಾರ ಹಾಗೂ ಬಿಜಾಪುರ ಭಾಗದಲ್ಲಿ ಹನಿ ನೀರಾವರಿ ಸೌಕರ್ಯವನ್ನು ಸರ್ಕಾರ ಹೆಚ್ಚಿಗೆ ನೀಡುತ್ತಾ ಬಂದಿದೆ. ಆ ದಿಶೆಯಲ್ಲಿ ನೂರಕ್ಕೆ ನೂರರಷ್ಟು ಸಹಾಯಧನ ನೀಡುತ್ತಾ ಬಂದಿದೆ. ಅದಕ್ಕೆ 5 ಎಕರೆ ಜಮೀನನ್ನು ನಿಗದಿಪಡಿಸಿದೆ. ಆದರೆ, ಈ ತೋಟಗಾರಿಕೆ ಇಲಾಖೆ ಒಂದನ್ನು ತೆಗೆದುಕೊಳ್ಳುವುದಾದರೆ, ನನಗೆ ಇರತಕ್ಕಂತಹ ಮಾಹಿತಿ ಪ್ರಕಾರ ಸರ್ಕಾರದಿಂದ ದೊರೆಯುವ ಸಹಾಯಧನಕ್ಕೆ ಅನೇಕ ಅರ್ಜಿಗಳು ಬರುತ್ತದೆ, ಆದರೆ ಇದರಲ್ಲಿ ಸರ್ಕಾರವು ಎಷ್ಟು ಜನರಿಗೆ ಸಹಾಯಧನ ನೀಡುತ್ತಿದೆ ಎನ್ನವುದು ಪ್ರಶ್ನೆ. ಇವತ್ತು ಚಿಂತಾಮಣಿ ತಾಲೂಕನ್ನು ಉದಾಹರಣೆಗೆ ತೆಗೆದುಕೊಂಡರೆ, ಆ ತಾಲ್ಲೂಕಿಗೆ ತೋಟಗಾರಿಕೆಗೆ ಸಂಬಂಧಿಸಿದಂತೆ ಹನ್ನೆರಡೂವರೆ ಲಕ್ಷ ರೂಪಾಯಿಗಳನ್ನು ಸರ್ಕಾರ ಸಹಾಯಧನವಾಗಿ ನೀಡಿದೆ: ಇದು 58 ಹೆಕ್ಟೇರ್‌ಗೆ ಅನ್ವಯಿಸತಕ್ಕದ್ದು, ಆದರೂ ಸಹ ಇವತ್ತು ಸರ್ಕಾರದ ಮುಂದೆ 13.5 ಲಕ್ಷ ಅರ್ಜಿಗಳು ಸಹಾಯಧನಕ್ಕಾಗಿ ಪೆಂಡಿಂಗ್ ಇದೆ. ಈಗಾಗಲೇ ನಡೆಯುತ್ತಿರುವ ಕಾಮಗಾರಿಗಳ ಸಲುವಾಗಿ ಇನ್ನೂ 20.00 ಲಕ್ಷ ರೂಪಾಯಿಗಳ ಸಹಾಯಧನ ಅವಶ್ಯಕತೆಯಿದೆ. ಈಗಾಗಲೇ ನಡೆಯುತ್ತಿರುವಂತಹ ಹಾಗೂ ನಡೆದಿರತಕ್ಕಂತಹ ಕಾಮಗಾರಿಗಳಿಗೆ ಹನಿ ನೀರಾವರಿ ಯೋಜನೆಯನ್ನು ಅನ್ವಯಿಸಲಾಗಿದೆ, ಇದರ ಸಲುವಾಗಿ ಸರ್ಕಾರದಿಂದ 33.50 ಲಕ್ಷ ರೂ.ಗಳು ಸಹಾಯಧನವಾಗಿ ಬರಬೇಕಾಗಿದೆ. ಇದು ಕೇವಲ ಚಿಂತಾಮಣಿ ತಾಲ್ಲೂಕಿಗೆ ಮಾತ್ರ ಅನ್ವಯಿಸುತ್ತದೆ. ಇದೇ ರೀತಿ ಇತರೆ ಜಿಲ್ಲೆಗಳಲ್ಲಿ ಎಷ್ಟು ಸಹಾಯಧನ ಸರ್ಕಾರದಿಂದ ಬರಬೇಕಾಗಿದೆ ಎಂಬುದು ನಮ್ಮ ಮುಂದಿರುವ ಪ್ರಶ್ನೆ. ಅದಕ್ಕೆ ಸರ್ಕಾರ ಎಷ್ಟು ಸಹಾಯಧನ ಕೊಡುತ್ತಿದೆ ಎಂಬ ಅಂಶವನ್ನು ಏಕೆ ಹೇಳುತ್ತಿದ್ದೇನೆಂದರೆ, ಆಯವ್ಯಯದಲ್ಲಿ ಮಂಡಿಸಿರುವ ಅಂಶ 51 ರಿಂದ 54 ರಲ್ಲಿ ಸರ್ಕಾರವು ಗ್ರಾಮೀಣ ಜನತೆಗೆ, ರೈತಾಪಿ ಜನತೆಗೆ ಈ ಹನಿ ನೀರಾವರಿ ಪದ್ಧತಿ ಇನ್ನು ಇತರೆ ಪದ್ಧತಿಗಳನ್ನು ಇನ್ನು ಹೆಚ್ಚಿನ ತಾಂತ್ರಿಕ ಟೆಕ್ನಾಲಜಿಯನ್ನು ಅಳವಡಿಸಿಕೊಳ್ಳಲು ಸಹಾಯ ಮಾಡಬೇಕೆಂಬ ಬಗ್ಗೆ ಹೆಚ್ಚು ದೀರ್ಘವಾಗಿ ಚರ್ಚೆಯಾಗಿದೆ. ಆದರೆ ಸರ್ಕಾರ ಬರೇ ಮಾತಿನಲ್ಲಿ ಇದನ್ನೆಲ್ಲಾ ಹೇಳುತ್ತಿದೆ, ಕೊಡುವುದೆಷ್ಟಿದೆ

ಎನ್ನುವುದು ಪ್ರಶ್ನೆ. ಈಗಾಗಲೇ ನಾನು ಆಗಲೇ ಹೇಳಿದ ಹಾಗೆ ಕೇವಲ ಹನ್ನೆರಡೂವರೆ ಲಕ್ಷ ರೂ ಕೊಟ್ಟಿದ್ದಾರೆ, ಇನ್ನೂ ಮುವತ್ತ ಮೂರುವರೆ ಲಕ್ಷ ರೂಗಳು ಬಾಕಿಯಿದೆ, ಕೇವಲ ಒಂದು ತಾಲ್ಲೂಕಿನಲ್ಲಿ, ಸರ್ಕಾರ ಬಾಕಿ ಇರುವ ಸಹಾಯಧನವನ್ನು ಬಿಡುಗಡೆ ಮಾಡುವ ಬಗ್ಗೆ ಸರ್ಕಾರ ಬರೇ ಬಾಯಿ ಮಾತಿನಲ್ಲಿ ಹೇಳಿದರೆ ಸಾಕಾಗುವುದಿಲ್ಲ. ಹಾಗಾಗಿ ಬಾಕಿಯಿರುವ ಹಣವನ್ನು ಬಿಡುಗಡೆ ಮಾಡಬೇಕೆಂದು ಸರ್ಕಾರವನ್ನು ನಾನು ಕೇಳಿಕೊಳ್ಳುತ್ತೇನೆ. ಕೋಲಾರ ಜಿಲ್ಲೆಯಲ್ಲಿ 5 ಎಕರೆ--2 ಹೆಕ್ಟೇರ್ ಎಂದು ಗರಿಷ್ಠ ಮಿತಿಯನ್ನು ನಿಗದಿಪಡಿಸಿದ್ದಾರೆ, ಆದರೆ ಒಬ್ಬ ರೈತ ಸರ್ಕಾರದಿಂದ ಸಹಾಯಧನ ಪಡೆಯಲಿಕ್ಕೆ ಈಗಿರುವ ಬರ ಪರಿಸ್ಥಿತಿಯನ್ನು ಪರಿಗಣಿಸಿ ಸರ್ಕಾರ ಅದನ್ನು 10 ಎಕರೆ ಅಥವಾ 4 ಹೆಕ್ಟೇರ್‌ಗೆ ಏರಿಸಬೇಕು, ಏಕೆಂದರೆ ನಾವು ಶತಾಯ ಗತಾಯ ಯಾವುದೇ ವಿಧಾನದಿಂದಾಗಲೇ ನೀರನ್ನು ಸಂರಕ್ಷಿಸಬೇಕಾಗಿದೆ, ಹನಿ ನೀರಾವರಿ ಪದ್ಧತಿ ನೀರನ್ನು ಸಂರಕ್ಷಣೆ ಮಾಡಲಿಕ್ಕೆ ಒಂದು ಉತ್ತಮವಾದ ವ್ಯವಸ್ಥೆಯಾಗಿರುವುದು ಸರ್ಕಾರ ಈ ಪದ್ಧತಿಯನ್ನು ಹೆಚ್ಚಿನ ಸಂಖ್ಯೆಯಲ್ಲಿ ಜನತೆ ಬಳಕೆ ಮಾಡಿಕೊಳ್ಳುವ ಸಲುವಾಗಿ ಹೆಚ್ಚಿನ ಸಹಾಯಧನ ನೀಡಬೇಕೆಂದು ಸರ್ಕಾರದಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಸರ್ಕಾರ ರೇಷ್ಮೆ ಇಲಾಖೆ ಹಾಗೂ ಕೃಷಿ ಇಲಾಖೆಗೆ ಸಹಾಯಧನವನ್ನು ನೀಡುತ್ತಿದೆ. ಕೃಷಿ ಇಲಾಖೆಯ ಟ್ರಾಕ್ಟರ್ ಕೊಡಲಿಕ್ಕೆ ಸಹಾಯಧನ ನೀಡುತ್ತಿದೆ, ರೇಷ್ಮೆ ಇಲಾಖೆಯಲ್ಲಿಯೂ ಸಹ ಈ ರೀತಿ ಯೋಜನೆಗಳಿಗೆ ಸಹಾಯಧನವನ್ನು ಕೊಡುತ್ತಿದೆ, ಆದರೆ ಸುಮಾರು 100 ಅರ್ಜಿಗಳು ಬಂದ ಕಡೆ ಕೇವಲ 10 ಅರ್ಜಿಗಳು ಮಾತ್ರ ಸಹಾಯಧನ ಸಿಗುತ್ತಿವೆ, ಹಾಗಾಗಿ ಬರೇ 10 ಜನಕ್ಕೆ ಸಹಾಯಧನ ನೀಡಿ ಉಳಿದ 90 ಜನಕ್ಕೆ ಸಹಾಯಧನ ನೀಡದೆ ಹೋಗುವುದನ್ನು ತಪ್ಪಿಸಲು ಸರ್ಕಾರ ಮೊದಲೇ ಅವರ ಅರ್ಜಿಯನ್ನು ಸ್ವೀಕರಿಸಿ ಅವರಿಗೆ ಸಹಾಯಧನವನ್ನು ಕೊಡುವಾಗ ಸೂಕ್ತ ವ್ಯವಸ್ಥೆಯನ್ನು ಮಾಡಬೇಕಾಗುತ್ತದೆ. ಕೇವಲ ಹೆಸರಿಗೆ ಕೊಟ್ಟರೆ ಆಗುವುದಿಲ್ಲ. ನಾವು ಒಂದು ಸಮಸ್ಯೆಯನ್ನು ಕೈಗೆತ್ತಿಕೊಂಡಾಗ ಅದನ್ನು ಸಂಪೂರ್ಣವಾಗಿ ಬಗೆಹರಿಸಲಿಕ್ಕೆ ಪ್ರಯತ್ನವನ್ನು ಮಾಡಬೇಕು. ಆ ರೀತಿ ಪ್ರಯತ್ನವನ್ನು ಸರ್ಕಾರ ಮಾಡುತ್ತಿಲ್ಲ. ಹೆಸರಿಗೆ ಕೇವಲ 10 ಜನಕ್ಕೆ ಕೊಟ್ಟರೆ ತನ್ನ ಕರ್ತವ್ಯ ಮುಗಿಯಿತು ಎನ್ನುವ ಅಭಿಪ್ರಾಯವನ್ನು ಇಟ್ಟುಕೊಂಡಿದೆ, ಅದು ತಪ್ಪು ಎಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಹಾಗೆಯೇ ಅಂಶ 63 ರಲ್ಲಿ, ಆಯವ್ಯಯದಲ್ಲಿ ಸೂಚಿಸಿರುವಂತೆ ಸರ್ಕಾರ ಇದುವರೆಗೆ ಪರಿಶಿಷ್ಟ ಮತ್ತು ವರ್ಗದ ಜನತೆಗೆ ವೈಯಕ್ತಿಕ ಕೊಳವೆಬಾವಿಗಳನ್ನು ನೀಡುವ ಯೋಜನೆ ಮೂಲಕ ಸಹಾಯವನ್ನು ನೀಡುತ್ತಾ ಬಂದಿದೆ. ಆ ಸಂಬಂಧವಾಗಿ ಇದುವರೆಗೆ ವರ್ಷಕ್ಕೆ ಐದು ಸಾವಿರ ಫಲಾನುಭವಿಗಳಿಗೆ ಈ ಸೌಲಭ್ಯವನ್ನು ಕೊಡುತ್ತಿದ್ದು, ಬರುವ ವರ್ಷದಲ್ಲಿ ಹತ್ತು ಸಾವಿರ ಫಲಾನುಭವಿಗಳಿಗೆ ಈ ಸೌಲಭ್ಯವನ್ನು ಕೊಡುತ್ತೇವೆಂದು ಹೇಳಿದೆ.

5.40 ಪಿಎಂ

ಇದೊಂದು ಸ್ವಾಗತಾರ್ಹ ಕಾರ್ಯಕ್ರಮ. ಇದು ಜಾರಿಯಾದರೆ ಪರಿಶಿಷ್ಟ ಜಾತಿ ಹಾಗೂ ವರ್ಗದ ಜನರಿಗೆ ಇನ್ನಷ್ಟು ಅನುಕೂಲವಾಗುತ್ತದೆ. ಆದರೆ ಕಳೆದ ಅಧಿವೇಶನ ಸಂದರ್ಭದಲ್ಲಿ ನಾನು ಒಂದು ಅಂಶವನ್ನು ಕೈಗೆತ್ತಿಕೊಂಡಿದ್ದೆ. ಅದು ಏನೆಂದರೆ, ಇವತ್ತು ನಮ್ಮ ಜಿಲ್ಲೆಯಲ್ಲಿ ನೀರಿನ ಮಟ್ಟದ ಆಳ ಬಳ್ಳನೂರು ಅಡಿಗೂ ಮೇಲೆ ಹೋಗಿದೆ. ಅದಕ್ಕೆ ಸರಿಯಾದ ಹಣವನ್ನು ಸರ್ಕಾರ ಒದಗಿಸುತ್ತಿಲ್ಲ. ಅದಕ್ಕೊಂದು ಉದಾಹರಣೆ ಇವತ್ತು ನನ್ನ ಕೈಯಲ್ಲಿ ಇದೆ. ಇದು ಚಿಂತಾಮಣಿ ತಾಲ್ಲೂಕಿನಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗದ ನಿಗಮದಿಂದ ರೈತನಿಗೆ ನೀಡಿರತಕ್ಕಂಥ ನೋಟೀಸ್.

ಇದರಲ್ಲಿ ಕೊಳವೆಬಾವಿ ಕೊರೆಯುವುದಕ್ಕೆ ಸುಮಾರು ಐವತ್ತು ಸಾವಿರ ರೂಪಾಯಿ ವೆಚ್ಚ ಪಂಪು ಮತ್ತು ಮೋಟಾರ್‌ನ್ನು ಅಳವಡಿಸುವುದಕ್ಕೆ ಐವತ್ತೈದು ಸಾವಿರ ರೂಪಾಯಿಗಳ ವೆಚ್ಚ ಹಾಗೂ ಇತರೆ ವೆಚ್ಚ ಮತ್ತು ಹತ್ತು ಸಾವಿರ ರೂಪಾಯಿಗಳು ಎಂದು ಬಾಕಿ ಕೊನೆಗೆ ಸರ್ಕಾರದಿಂದ ದೊರಕತಕ್ಕಂಥ ಸಹಾಯಧನ ಕೇವಲ ಎಪ್ಪತ್ತೈದು ಸಾವಿರ ರೂಪಾಯಿಗಳು ಮಾತ್ರ. ಇನ್ನು ರೈತ ಸುಮಾರು ಮೂವತ್ತು ಸಾವಿರ ರೂಪಾಯಿಗಳನ್ನು ಕಟ್ಟಬೇಕೆಂದು ಈ ನೋಟೀಸನ್ನು ಕೊಟ್ಟಿದ್ದಾರೆ. ಇವರೆಲ್ಲಾ ಕೂಲಿಕಾರ್ಮಿಕರು ಮತ್ತು ಇವರು ಎಲ್ಲಿಂದ ತಂದು ಸರ್ಕಾರಕ್ಕೆ ಮೂವತ್ತು ಸಾವಿರ ರೂಪಾಯಿಗಳನ್ನು ಕಟ್ಟುತ್ತಾರೆ? ಇಲ್ಲಿ ಹೇಳುತ್ತಾರೆ – "ನಿಗದಿತ ದಿನಾಂಕದೊಳಗೆ ನೀವು ಹೆಚ್ಚುವರಿ ಹಣವನ್ನು ನಿಗಮಕ್ಕೆ ಪಾವತಿಸದೇ ಇದ್ದಲ್ಲಿ ನಿಮಗೆ ಮಂಜೂರಾದ ಕೊಳವೆ ಬಾವಿಯನ್ನು ರದ್ದುಪಡಿಸಿ ಆಯ್ಕೆ ಪಟ್ಟಿಯಲ್ಲಿ ಇರುವ ಇನ್ನೊಬ್ಬರಿಗೆ ಕೊಳವೆಬಾವಿಯನ್ನು ಕೊಡಲಾಗುವುದು" ಎಂದು ಹೇಳಿ ಹತ್ತು ದಿವಸ ಸಮಯ ಕೊಟ್ಟಿದ್ದಾರೆ. ಅವರು ಹತ್ತು ದಿವಸದಲ್ಲಿ ಮೂವತ್ತು ಸಾವಿರ ರೂಪಾಯಿಗಳನ್ನು ಎಲ್ಲಿಂದ ತಂದು ಕಟ್ಟುತ್ತಾರೆ? ಮೂವತ್ತು ಸಾವಿರ ರೂಪಾಯಿಗಳನ್ನು ಹತ್ತು ದಿವಸಗಳಲ್ಲಿ ಹತ್ತು ದಿವಸಗಳಲ್ಲಿ ಅಲ್ಲ, ಯಾವತ್ತಿಗೂ ತಂದು ಕಟ್ಟುವ ಶಕ್ತಿ ಅವರಿಗೆ ಇಲ್ಲ. ಹೀಗಾಗಿ ಮಂಜೂರಾಗಿರತಕ್ಕಂಥ ಕೊಳವೆಬಾವಿಗಳು ಹಾಗೆಯೇ ಉಳಿದುಹೋಗಿವೆ. ಏಕೆಂದರೆ ಅವರು ಮೂವತ್ತು ಸಾವಿರ ರೂಪಾಯಿಗಳನ್ನು ತಂದು ಕೊಡಬೇಕು. ಒಬ್ಬ ಕೂಲಿ ಮಾಡಿ ಜೀವನ ಮಾಡತಕ್ಕಂಥ ವ್ಯಕ್ತಿ ಹೇಗೆ ತಂದು ಕೊಡುವುದಕ್ಕೆ ಸಾಧ್ಯ? ನಾನು ಕಳೆದ ಬಾರಿ ಸಹ ಈ ಸದನದಲ್ಲಿ ಈ ವಿಷಯವನ್ನು ಕೈಗೆತ್ತಿಕೊಂಡಿದ್ದೆ. ಆದರೆ ನಾವು ನೋಡುತ್ತಾ ಇರುವ ಹಾಗೆ ಈ ಸದನದಲ್ಲಿ ಏನು ಪರಿಸ್ಥಿತಿ ಉದ್ಭವವಾಗಿದೆಯೆಂದರೆ, ನಾವು ಯಾವುದೇ ಒಂದು ವಿಷಯವನ್ನು ಸರ್ಕಾರದ ಗಮನಕ್ಕೆ ತಂದರೂ ಸಹ ಅದಕ್ಕೆ ಉತ್ತರವೇ ಬರುವುದಿಲ್ಲ. ನಾನು ಹೊಸಬ. ನಾನು ಈ ಸದನದಲ್ಲಿ ಕೇವಲ ಹದಿನೈದು ದಿವಸ ಭಾಗವಹಿಸಿರಬಹುದು. ಆದರೆ ಅನೇಕ ಹಿರಿಯ ಸದಸ್ಯರುಗಳು ಇಲ್ಲಿ ಇದ್ದಾರೆ. ನಾವು ಸಹ ಕಳೆದ ಸದನದ ಸಂದರ್ಭದಲ್ಲಿ ಕೆಲವೊಂದು ಪ್ರಶ್ನೆಗಳನ್ನು ಕೈಗೆತ್ತಿಕೊಂಡಿದ್ದೆ. ಆದರೆ ಅವುಗಳು ಸರ್ಕಾರಕ್ಕೆ ಹೋದರೆ ಸರ್ಕಾರದಿಂದ ಉತ್ತರವೇ ಬಂದಿಲ್ಲ. ಇದು ಒಂದು ಗಂಭೀರವಾದ ಸಮಸ್ಯೆ. ನಮ್ಮ ಜಿಲ್ಲೆ ಮಾತ್ರವಲ್ಲ ಸುತ್ತಮುತ್ತಲಿನ ಜಿಲ್ಲೆಗಳಲ್ಲೂ ಸಹ ಈ ಸಮಸ್ಯೆ ಬಹಳವಾಗಿ ಕಾಡುತ್ತಿದೆ. ಸರ್ಕಾರ ಕೊನೇಪಕ್ಷ ಉತ್ತರ ಕೊಡುವ ಸೌಜನ್ಯಕ್ಕೂ ಸಹ ಹೋಗಿಲ್ಲ. ಹಾಗಾದರೆ ಸದನವನ್ನು ನಾವು ಏಕೆ ನಡೆಸುವುದು? ಈ ಸದನಕ್ಕೆ ಗೌರವ ಇದೆಯೆ? ದಯವಿಟ್ಟು ಸರ್ಕಾರ ಇಂತಹ ವಿಷಯಗಳನ್ನು ಗಮನಕ್ಕೆ ತೆಗೆದುಕೊಂಡು ಕೊನೆಯ ಪಕ್ಷ ವಿರೋಧ ಪಕ್ಷದವರು ಅಲ್ಲಿ ಇದ್ದಾರೆ. ಅಲ್ಲಿ ಅವರು ಕೂತಿದ್ದಾರೆ, ಅವರು ಎತ್ತಿರತಕ್ಕಂಥ ಸಮಂಜಸವಾದ ಪ್ರಶ್ನೆಗಳಿಗೆ ಕನಿಷ್ಟ ಪಕ್ಷ ಉತ್ತರವನ್ನಾದರೂ ಕೊಡಬೇಕೆನ್ನುವ ಸೌಜನ್ಯವನ್ನು ತೋರಿಸಬೇಕು. ನಾವು ಯಾವುದೂ ತರಲೆ ಪ್ರಶ್ನೆಗಳನ್ನು ಕೇಳುತ್ತಿಲ್ಲ. ಆದ್ದರಿಂದ ನಮ್ಮ ಸಮಂಜಸವಾದ ಪ್ರಶ್ನೆಗಳಿಗೆ ಸರ್ಕಾರ ಉತ್ತರವನ್ನು ಕೊಡಬೇಕು ಹಾಗೂ ಈ ಸಮಸ್ಯೆಯನ್ನು ಸರ್ಕಾರ ಬಗೆಹರಿಸಬೇಕೆಂದು ಈ ಸಂದರ್ಭದಲ್ಲಿ ನಾನು ಕೇಳಿಕೊಳ್ಳುತ್ತಿದ್ದೇನೆ. ಇದು ನೀವು ಐದು ವರ್ಷದಲ್ಲಿ ಐವತ್ತು ಸಾವಿರ ಕೊಡುತ್ತೇವೆ ಎಂದು ಹೆಸರಿಗೆ ಮಾತ್ರ ಹೇಳಿಕೊಳ್ಳಬಹುದು. ಆದರೆ ಅಲ್ಲಿ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಆಗುವುದಿಲ್ಲ. ಏಕೆಂದರೆ ಮೂವತ್ತು ಸಾವಿರ ರೂಪಾಯಿಗಳನ್ನು ಕಟ್ಟಿ ಎಂದು ಯಾವಾಗ ನೀವು ಹೇಳುತ್ತೀರಿ, ಅಷ್ಟು ಹಣವನ್ನು ಕಟ್ಟುವ ಶಕ್ತಿ ಆತನಿಗೆ ಯಾವ ಕಾಲಕ್ಕೂ ಬರುವುದಿಲ್ಲ. ಹೀಗಾಗಿ ನೀವು ಈ ಸಮಸ್ಯೆಯನ್ನು

ಬಗೆಹರಿಸಿದ ಹಾಗೆ ಆಗುವುದಿಲ್ಲ. ಆದರೆ ತಾವು ಹೇಳಿಕೊಳ್ಳಬಹುದು ಏನೆಂದರೆ ನಾವು ಒಂಬತ್ತು ಲಕ್ಷ ಮನೆಗಳನ್ನು ಕೊಟ್ಟು ಬಿಟ್ಟಿದ್ದೇವೆ, ಐವತ್ತು ಸಾವಿರ ಬೋರ್‌ವೆಲ್‌ಗಳನ್ನು ಹಾಕಿಕೊಟ್ಟಿದ್ದೇವೆ ಎಂದು. ಆದರೆ ಈ ತರಹ ಹೇಳಿಕೆಗಳನ್ನು ಕೊಡುವುದರಿಂದ ಖಂಡಿತವಾಗಿಯೂ ಸಮಸ್ಯೆಯಂತೂ ಹಾಗೆಯೇ ಉಳಿಯುತ್ತದೆ, ಅದನ್ನು ತಾವು ಬಗೆಹರಿಸುವುದಕ್ಕೆ ಆಗುವುದಿಲ್ಲ. ಈಗ ಇರತಕ್ಕಂಥ ಒಳಾಂತರ ಸಮಸ್ಯೆಗಳು ಏನಿವೆ ಅವುಗಳನ್ನು ಸಹ ಬಗೆಹರಿಸುವುದಕ್ಕೆ ತಾವು ಕ್ರಮ ತೆಗೆದುಕೊಳ್ಳಬೇಕೆಂದು ಈಸಮಯದಲ್ಲಿ ನಾನು ಸರ್ಕಾರವನ್ನು ಒತ್ತಾಯ ಮಾಡುವುದಕ್ಕೆ ಇಚ್ಛೆಪಡುತ್ತೇನೆ. ಹಾಗೆಯೇ ಮುಂದುವರೆದು, ಈಗಾಗಲೇ ಮುಖ್ಯಮಂತ್ರಿಗಳ ಗ್ರಾಮೀಣ ಸಡಕ್ ಯೋಜನೆಯಡಿಯಲ್ಲಿ ಸುಮಾರು ಎರಡೂವರೆ ಕೋಟಿ ರೂ.ಗಳಿಗೆ ನಮ್ಮೆಲ್ಲರಿಂದಲೂ ಸರ್ಕಾರ ಅಂದಾಜನ್ನು ತರಿಸಿಕೊಂಡಿದೆ. ಈ ಅಂದಾಜನ್ನು ಈ ವರ್ಷ ಒಂದೂಕಾಲು ಕೋಟಿ ಎಂದು ಹೇಳಿದ್ದರು. ಒಂದೂಕಾಲು ಕೋಟಿ ರೂ. ಹೋಗಿ ಅದು ಇಪ್ಪತ್ತೈದು ಲಕ್ಷ ರೂ ಆಯಿತು. ಇಪ್ಪತ್ತೈದು ಹೋಗಿ ಇಪ್ಪತ್ತು ಲಕ್ಷ ರೂ ಆಯಿತು. ಇವತ್ತು ಬೆಳಿಗ್ಗೆ ನಾನು ವಿಚಾರಿಸಿದಾಗ ಅದು ಕೊನೆಗೆ ಹದಿನೈದು ಲಕ್ಷವಾಗಿ ಬರುತ್ತಿದೆಯಂತೆ. ಕಳೆದ ಅಧಿವೇಶನದಲ್ಲಿ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ನಲ್ವತ್ತು ಕೋಟಿ ರೂಪಾಯಿಗಳನ್ನು ರಸ್ತೆಗಳ ಉಸ್ತುವಾರಿಕೆಗೆ, ರಸ್ತೆಗಳ ಹಳ್ಳಗಳನ್ನು ಮುಚ್ಚುವುದಕ್ಕೆ ಕೊಡುತ್ತೇವೆ ಎಂದು ಹೇಳಿದ್ದರು. ಅದನ್ನು ನಾನು ಆ ಸಂದರ್ಭದಲ್ಲಿ ಸ್ವಾಗತಿಸಿದ್ದೆ. ಆದರೆ ಇವತ್ತು ಏನಾಗಿದೆ ಎಂದರೆ, ಏನು ಮುಖ್ಯಮಂತ್ರಿಗಳ ಗ್ರಾಮೀಣ ಸಡಕ್ ಯೋಜನೆಯಲ್ಲಿ ಒಂದೊಂದು ತಾಲ್ಲೂಕಿಗೆ ಸುಮಾರು ಹದಿನೈದು ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ ಅದರಲ್ಲಿ ಐದು ಲಕ್ಷ ರೂಪಾಯಿಗಳನ್ನು ಕಿತ್ತು ಲೋಕೋಪಯೋಗಿ ಇಲಾಖೆಗೆ ಕೊಡುತ್ತಾರಂತೆ. ಅವರ ಮುಖಾಂತರ ಅವರು ರಸ್ತೆಗಳ ಹಳ್ಳಗಳನ್ನು ಮುಚ್ಚಬೇಕಂತೆ. ಕೊನೆಗೆ ಉಳಿಯುವುದು ಬರೇ ಹತ್ತು ಲಕ್ಷ ರೂಪಾಯಿಗಳು ಮಾತ್ರ. ಸರ್ಕಾರ ಏಕೆ ಈ ರೀತಿ ಅಂಕಿಅಂಶಗಳ ಮಾಟವನ್ನು ಮಾಡುವುದರಲ್ಲಿ ತೊಡಗಿದೆ? ಕೊಟ್ಟಂಥ ಭರವಸೆಯನ್ನು ಉಳಿಸಿಕೊಳ್ಳುವುದರಲ್ಲಿ ಸರ್ಕಾರವಂತೂ ಖಂಡಿತವಾಗಿಯೂ ಪ್ರಯತ್ನ ಮಾಡುತ್ತಿಲ್ಲ. ಅಂಕಿ ಅಂಶಗಳ ಮಾಟವನ್ನು ಮಾಡುವುದನ್ನು ಬಿಟ್ಟು ಏನು ಭರವಸೆಯನ್ನು ಕೊಟ್ಟಿದ್ದಾರೆ ಅದನ್ನು ಉಳಿಸಿಕೊಳ್ಳುವುದಕ್ಕೆ ಸರ್ಕಾರ ಪ್ರಯತ್ನ ಮಾಡಬೇಕು. ಈ ರೀತಿ ಮಾಯ–ಮಾಟವನ್ನು ಅರ್ಥಮಾಡಿಕೊಳ್ಳುವ ಶಕ್ತಿ ಜನರಿಗೆ ಇದೆ. ಆದ್ದರಿಂದ ದಯವಿಟ್ಟು ಸರ್ಕಾರ ಮಾಯ–ಮಾಟವನ್ನು ಮಾಡುವುದನ್ನು ನಿಲ್ಲಿಸಬೇಕೆಂದು ಈ ಸಂದರ್ಭದಲ್ಲಿ ನಾನು ಶೀಘ್ರವಾಗಿ ಸರ್ಕಾರದ ಮೇಲೆ ಒತ್ತಡವನ್ನು ತರುವುದಕ್ಕೆ ಇಚ್ಛೆಪಡುತ್ತೇನೆ. ಹಾಗೆಯೇ ಏನು ಹದಿನೈದು ಲಕ್ಷ ರೂಪಾಯಿ ಬಂದಿದೆ, ಈ ಕಾಮಗಾರಿಯನ್ನು ಲ್ಯಾಂಡ್ ಆರ್ಮಿ ಮುಖಾಂತರ ಆಗಬೇಕೆಂದು ಸರ್ಕಾರ ಆದೇಶವನ್ನು ಹೊರಡಿಸಿದೆಯಂತೆ. ನನಗೆ ಗೊತ್ತಿರುವ ಹಾಗೆ ನಮ್ಮ ಕೋಲಾರ ಜಿಲ್ಲಾ ಪಂಚಾಯತ್‌ನಲ್ಲಿ ಲ್ಯಾಂಡ್ ಆರ್ಮಿಗೆ ಯಾವುದೇ ಕಾಮಗಾರಿಯನ್ನು ಕೊಡಬಾರದು ಎನ್ನತಕ್ಕಂಥ ಆದೇಶವನ್ನು ಹೊರಡಿಸಿದೆ. ಏಕೆಂದರೆ ಅವರು ಎಷ್ಟು ಕಳಪೆ ಕಾಮಗಾರಿಯನ್ನು ಮಾಡುತ್ತಾರೆ ಎಂದರೆ ಅವರಷ್ಟು ಕಳಪೆ ಕಾಮಗಾರಿಯನ್ನು ಮಾಡುವವರು ಬಹುಶಃ ನಮ್ಮ ರಾಜ್ಯದಲ್ಲಿ ಇನ್ನು ಯಾರೂ ಇಲ್ಲ. ಹೋಗಿ ಹೋಗಿ ಅವರಿಗೆ ಇದನ್ನು ಕೊಟ್ಟಿದ್ದರಿಂದ ನಮಗಂತೂ ಇದರಿಂದ ತೀವ್ರ ಅಸಮಾಧಾನವಾಗಿದೆ. ಏಕೆಂದರೆ ನಮ್ಮ ಕ್ಷೇತ್ರದಲ್ಲಿ ಯಾವುದೇ ಕಾಮಗಾರಿ ಇರಲಿ, ಅದರ ಗುಣಮಟ್ಟವನ್ನು ಬಹಳ ಎಚ್ಚರಿಕೆಯಿಂದ ಕಾಪಾಡಿಕೊಂಡು ಬರುತ್ತಿದ್ದೇವೆ. ಲ್ಯಾಂಡ್ ಆರ್ಮಿಗೆ ಯಾವುದೇ ಕಾಮಗಾರಿಯನ್ನು ಕೊಟ್ಟರೂ ಕೂಡ ಅವರು ಸರಿಯಾಕಿ ಕೆಲಸ ಮಾಡುವುದಿಲ್ಲ

ಕಾಮಗಾರಿಗಳನ್ನು ಶೀಘ್ರವಾಗಿ ಮಾಡಬೇಕೆನ್ನುವ ಉದ್ದೇಶದಿಂದ ಲ್ಯಾಂಡ್ ಆರ್ಮಿಗೆ ಕೊಟ್ಟರೆ ಅದು ಒಂದೆರಡು ವರ್ಷ ಸಹ ಉಳಿಯುವುದಿಲ್ಲ. ಅಂತಹ ಕಳಪೆ ಕಾಮಗಾರಿಯನ್ನು ಅವರು ಮಾಡುತ್ತಾರೆ. ನನ್ನ ಕ್ಷೇತ್ರದಲ್ಲಿ ನಮ್ಮ ತಂದೆಯವರ ಸಮಯದಲ್ಲಿ ಲ್ಯಾಂಡ್ ಆರ್ಮಿಯವರು ಒಂದು ರಸ್ತೆಗೆ ಒಂದು ಯೋಜನೆಯನ್ನು ತಯಾರು ಮಾಡಿದ್ದರು. ಅವರು ಯೋಜನೆಯನ್ನು ತಯಾರು ಮಾಡಿದ್ದು ಸುಮಾರು ಮೂರು ಕಿಲೋಮೀಟರ್ ದೂರಕ್ಕೆ. ನಮ್ಮ ತಂದೆಯವರಿಗೆ ಆ ಯೋಜನೆಯನ್ನು ನೋಡುತ್ತಿದ್ದಾಗಲೇ ಸಂಶಯ ಬಂದಿತು. ಇದು ಹೇಗೆ ಇಷ್ಟು ಹಣ ಬೇಕು ಎಂದು ಇಲ್ಲಿ ವ್ಯಕ್ತಪಡಿಸಿದ್ದಾರೆ ಅಂತ ಹೇಳಿ ನಮ್ಮ ತಂದೆಯವರು ಬೇರೆ ಯಾರೋ ಇಂಜಿನಿಯರ್‌ನ್ನು ಕರೆಸಿ ಅದೇ ಕೆಲಸಕ್ಕೆ ಒಂದು ಎಸ್ಟಿಮೇಟ್ ಮಾಡಿ ಎಂದು ಹೇಳಿದರು. ಅವರು ಎಸ್ಟಿಮೇಟ್ ಮಾಡಿದರೆ ಸುಮಾರು ಹತ್ತು ಲಕ್ಷ ರೂಪಾಯಿ ವ್ಯತ್ಯಾಸ ಕಂಡು ಬಂದಿತು. ಲ್ಯಾಂಡ್ ಆರ್ಮಿಯವರು ಕೊಟ್ಟ ಯೋಜನೆಗೂ ಹಾಗೂ ಬೇರೆಯವರು ತಯಾರು ಮಾಡಿದ ಯೋಜನೆಗೂ ಹತ್ತು ಲಕ್ಷ ರೂಪಾಯಿಗಳ ವ್ಯತ್ಯಾಸ ಇತ್ತು. ಕೊನೆಗೆ ನಮ್ಮ ತಂದೆಯವರು, ಅವರೇ ಸ್ವತಃ ಆ ರಸ್ತೆಯಲ್ಲಿ ನಡೆದು ಅವರೇ ಮತ್ತೆ ಆ ಯೋಜನೆಯನ್ನು ತಯಾರು ಮಾಡಿಸಿದರೆ ಹತ್ತು ಲಕ್ಷ ರೂಪಾಯಿ ಕಡಿಮೆಯಾಗಿದೆ. ಇಂತಹ ಕಳಪೆ ಕೆಲಸ ಮಾಡತಕ್ಕವರು ಲ್ಯಾಂಡ್ ಆರ್ಮಿಯವರು. ಹೀಗಿರುವಾಗ ಅವರಿಗೇನೇ ನಾವು ನೇರವಾಗಿ ಇಡೀ ರಾಜ್ಯದ ಈ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಬೇಕೆಂದು ಕೊಟ್ಟರೆ ಅವರೇನಾದರೂ ಗುಣಮಟ್ಟವನ್ನು ಕಾಪಾಡುತ್ತಾರೋ ಎನ್ನುವ ಪ್ರಶ್ನೆ ನಮ್ಮೆಲ್ಲರನ್ನೂ ಕಾಡುತ್ತದೆ. ಅದಕ್ಕೂ ಸಹ ಸರ್ಕಾರ ಉತ್ತರ ಕೊಡಬೇಕೆಂದು ತಮ್ಮ ಮೂಲಕ ನಾನು ಸರ್ಕಾರವನ್ನು ಈ ಸಂದರ್ಭದಲ್ಲಿ ಮನವಿ ಮಾಡಿಕೊಳ್ಳುವುದಕ್ಕೆ ಇಚ್ಛೆಪಡುತ್ತೇನೆ.

**ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)**: ಮಾನ್ಯ ಸದಸ್ಯರು ಬಹಳ ಚೆನ್ನಾಗಿ ಮಾತನಾಡುತ್ತಿದ್ದಾರೆ. ಅವರು ಎಲ್ಲಾ ಅಂಕಿಸಂಖ್ಯೆಗಳನ್ನು ಅಭ್ಯಾಸ ಮಾಡಿದ್ದಾರೆ. ನನಗೆ ಬಹಳ ಸಂತೋಷವಾಯಿತು. ಇದರ ಬಗ್ಗೆ ಹೇಳಬೇಕಾದರೆ, ಲ್ಯಾಂಡ್ ಆರ್ಮಿಗೆ ಕೊಡುವ ಕಾರಣ ಏನೆಂದರೆ ಅವರು ಟೆಂಡರ್ ಹಾಕಬೇಕಾದ್ದು ಇಲ್ಲ. ಟೆಂಡರ್ ಹಾಕಬೇಕಾದರೆ ತಿಂಗಳುಗಟ್ಟಲೆ ಆಗುತ್ತದೆ. ಈ ಕೆಲಸ ಸದ್ಯಕ್ಕೆ ಆಗಬೇಕೆಂಬುದು ಸರ್ಕಾರದ ಉದ್ದೇಶ ಇರುವುದರಿಂದ ಲ್ಯಾಂಡ್ ಆರ್ಮಿಗೆ ಕೊಟ್ಟಿದ್ದಾರೆ. ತಮಗೆ ಗೊತ್ತಿರಬೇಕು ಏನೆಂದರೆ ನಮ್ಮ ಕೇಂದ್ರ ಸರ್ಕಾರದ ಸಡಕ್ ಯೋಜನೆಯಲ್ಲಿ ಇನ್ನೂರು-ಮುನ್ನೂರು ಕೋಟಿ ರೂಪಾಯಿ ಖರ್ಚಾಗಿದೆ. ಅದರಲ್ಲಿ ಅರ್ಧಭಾಗ ಲ್ಯಾಂಡ್ ಆರ್ಮಿಯವರೇ ಮಾಡಿದ್ದಾರೆ. ಈ ಲ್ಯಾಂಡ್ ಆರ್ಮಿಯಿಂದ ಕೆಲವು ಕಡೆ ಕಳಪೆ ಕೆಲಸ ಆಗಿರಬಹುದು. ಆದರೆ ನೀವು ಜನರಲ್ ಆಗಿ ಅವರು ಮಾಡಿದ್ದೆಲ್ಲಾ ಕಳಪೆ ಕೆಲಸ ಎಂದು ಹೇಳುವುದು ಸರಿಯಲ್ಲ. ಸರ್ಕಾರ ಯಾವ ಉದ್ದೇಶದಿಂದ ಲ್ಯಾಂಡ್ ಆರ್ಮಿಗೆ ಕೊಟ್ಟಿದೆ ಎಂದು ಅಷ್ಟು ಮಾತ್ರ ತಮಗೆ ಹೇಳುತ್ತಿದ್ದೇನೆ. ಒಳ್ಳೆಯ ಉದ್ದೇಶದಿಂದಲೇ ಅವರಿಗೆ ಕೊಟ್ಟಿದ್ದೇವೆ.

**ಛೇರ್ಮನ್ (ಯು.ಆರ್. ಸಭಾಪತಿ)**: ಸಚಿವರಲ್ಲಿ ಒಂದು ವಿನಂತಿ. ನಮ್ಮ ಉಡುಪಿ ಜಿಲ್ಲೆಯಲ್ಲಿ ಕೂಡ ಲ್ಯಾಂಡ್ ಆರ್ಮಿಗೆ ಕೊಡಬಾರದು ಅಂತ ನಾವು ತೀರ್ಮಾನ ಮಾಡಿದ್ದೇವೆ. ಹೆಚ್ಚಿನ ಜಿಲ್ಲೆಗಳಲಿ ಲ್ಯಾಂಡ್ ಆರ್ಮಿಯವರಿಗೆ ಕಾಮಗಾರಿಗಳನ್ನು ಕೊಡಬಾರದು ಎಂದು ರೆಸಲ್ಯೂಶನ್ ಪಾಸ್ ಮಾಡಿದ್ದಾರೆ. ತಾವು ಇದರ ಬಗ್ಗೆ ಸ್ವಲ್ಪ ಗಮನ ಕೊಟ್ಟರೆ ಒಳ್ಳೆಯದು ಅಂತ ಕಾಣುತ್ತದೆ.

**ಶ್ರೀ ಆರಗ ಜ್ಞಾನೇಂದ್ರ:** ಮಾನ್ಯ ಸಚಿವರೇ, ಇಡೀ ರಾಜ್ಯದಲ್ಲೆಲ್ಲಾ ಇದೇ ಪರಿಸ್ಥಿತಿ ಇದೆ. ನಮ್ಮಲ್ಲಿ ಅವರು ಏನು ಮಾಡಿದ್ದಾರೆ ಎಂದರೆ ಈ ಸಣ್ಣ ಸಣ್ಣ ಕಂಟ್ರಾಕ್ಟ್ ಮಾಡುವಾಗ ಜಿಲ್ಲೆಯವರಿಗೆ, ಕಾರ್ಮಿಕರಿಗೆಲ್ಲಾ ಚೆಕ್ ಕೊಟ್ಟಿದ್ದಾರಲ್ಲಾ, ಅದು ಕೊಟ್ಟ ಕೂಡಲೇ ಬೌನ್ಸ್ ಆಗಿದೆ. ಅವರು ಚೆಕ್ ಕೊಟ್ಟು ಓಡಿಹೋಗಿಬಿಡುತ್ತಾರೆ. ಲ್ಯಾಂಡ್ ಆರ್ಮಿಗೆ ಎರಡೆರಡು ತಿಂಗಳಿಗೆ ಒಬ್ಬ ಇಂಜಿನಿಯರ್ ಇರುತ್ತಾರೆ. ಅವರು ಕೊಟ್ಟ ಚೆಕ್‌ಗಳೆಲ್ಲಾ ಲ್ಯಾಪ್ಸ್ ಆಗುತ್ತಿವೆ, ಇಂತಹ ಒಂದು ದಯನೀಯ ಪರಿಸ್ಥಿತಿ ಇದೆ. ಅವರು ಯಾರ್ಯಾರು ಬರುತ್ತಾರೆ, ಅವರ ಮೇಲೆ ಯಾರಿಗೂ ಕಂಟ್ರೋಲ್ ಇಲ್ಲ. ಸುಮ್ಮನೆ ಅದನ್ನು ಒಂದು ಇಲಾಖೆ ಅಂತ ಏಕೆ ಇಟ್ಟುಕೊಂಡಿದ್ದೀರಿ?

**ಶ್ರೀ ಕೃಷ್ಣ ಭೈರೇಗೌಡ:** ಇದು ಕೇವಲ ನಾನು ಮಾತ್ರ ಹೇಳಿದ ಅಭಿಪ್ರಾಯ ಅಲ್ಲ. ತ್ವರಿತವಾಗಿ ಕಾಮಗಾರಿಯನ್ನು ಮುಗಿಸಬೇಕೆನ್ನುವ ಉದ್ದೇಶದಿಂದ ಲ್ಯಾಂಡ್ ಆರ್ಮಿಗೆ ಕೊಟ್ಟಿದ್ದೇವೆ ಎಂದು ಈಗಾಗಲೇ ಮಾತನಾಡುವಾಗ ತಾವು ಹೇಳಿದಿರಿ. ಆದರೆ ಕಾಮಗಾರಿಯನ್ನೇ ಕಳಪೆ ಮಾಡಿದಾಗ ಅದನ್ನು ತ್ವರಿತವಾಗಿ ಮಾಡಿ ಏನು ಪ್ರಯೋಜನ? ಹಾಗೂ ಇದು ನನ್ನ ವೈಯಕ್ತಿಕ ಅಭಿಪ್ರಾಯ ಅಲ್ಲ. ದಯಮಾಡಿ ನಾನು ತಮ್ಮ ಮೂಲಕ ಮಾನ್ಯ ಹಿರಿಯ ಸಚಿವರ ಗಮನಕ್ಕೆ ತರುವುದಕ್ಕೆ ಇಚ್ಛಿಸಿದ್ದುತ್ತಿದ್ದೇನೆ. ಕೋಲಾರ ಜಿಲ್ಲಾ ಪರಿಷತ್ತು ಅನೇಕ ಬಾರಿ ಈ ಹಿಂದೆ ರೆಸಲ್ಯೂಷನ್ ಪಾಸ್ ಮಾಡಿದೆ. ನಮ್ಮ ಜಿಲ್ಲೆಯಲ್ಲಿ ಲ್ಯಾಂಡ್ ಆರ್ಮಿಗೆ ಯಾವುದೇ ಕಾಮಗಾರಿಯನ್ನು ಕೊಡಬಾರದು ಎಂದು ಆ ರೀತಿಯ ರೆಸಲ್ಯೂಷನ್ ಪಾಸ್ ಮಾಡಿದೆ.

**ಶ್ರೀ ಎಸ್.ಎಸ್. ಪಾಟೀಲ್:** ಸನ್ಮಾನ್ಯ ಸಚಿವರೇ, ಅದಕ್ಕೆ ಒಬ್ಬರು ಅಧ್ಯಕ್ಷರು ಎಂದು ಮಾಡುತ್ತಾರೆ. ಅವರು ಮತ್ತೊಬ್ಬರಿಗೆ ಕೆಲಸ ಕೊಡಿ ಎಂದು ಅಧಿಕಾರಿಗಳಿಗೆ ಫೋನ್ ಮಾಡಿ ಹೇಳುತ್ತಾರೆ. ಇದು ಯಾವ ರೀತಿಯದು ಎಂದು ನಮಗೆ ತಿಳಿಯುವುದಿಲ್ಲ. ಅದು ಒಂದು ಕಂಟ್ರಾಕ್ಟ್ ಎಜೆನ್ಸಿ. ಆ ಅಧ್ಯಕ್ಷರೇ ಫೋನ್ ಮಾಡಿ ಇನ್ನೊಬ್ಬರಿಗೆ ಕೆಲಸ ಕೊಡಿ ಎಂದು ಹೇಳುತ್ತಾರೆ. ಇದು ಅಲ್ಲಿ ನಡೆಯುತ್ತದೆ. ಅದರ ಬಗ್ಗೆ ಮಂತ್ರಿಗಳು ಲಕ್ಷ್ಯವಹಿಸಬೇಕು. ತಮಗೆ ಅಧಿಕಾರ ಇದೆಯೋ ಇಲ್ಲವೋ ನನಗೆ ಗೊತ್ತಿಲ್ಲ, ಏಕೆಂದರೆ ಅದಕ್ಕೆ ಅಧ್ಯಕ್ಷರನ್ನು ಹಾಕಿದ ತಕ್ಷಣ ಅವರದ್ದೇ ಅಧಿಕಾರ ಬರುತ್ತದೆ. ಅದರಲ್ಲಿ ಅಧ್ಯಕ್ಷರನ್ನಾಗಿ ಆಡಳಿತ ಪಕ್ಷದ ಯಾರನ್ನಾದರೂ ಹಾಕಿಬಿಡುತ್ತೀರಿ. ಅದು ಏನು ಮಾಡಲು ಆಗುವುದಿಲ್ಲ. ಕೆಲವು ಅಧಿಕಾರಿಗಳು ಒಳ್ಳೆಯ ರೀತಿಯಲ್ಲಿ ಕೆಲಸ ಮಾಡುತ್ತಾರೆ. ಉದಾಹರಣೆಗೆ, ನನ್ನ ಕ್ಷೇತ್ರದಲ್ಲಿ ಬಹಳ ಒಳ್ಳೆಯ ರೀತಿಯಲ್ಲಿ ಕೆಲಸ ಮಾಡುತ್ತಿದ್ದರು ಎಂದು ನಾವುಗಳು ಮಾತನಾಡಿಕೊಂಡು ಕೆಲಸವನ್ನು ಕೊಟ್ಟೆವು. ಕೆಲಸ ಸರಿಯಾಗಿ ನಡೆದಿದ್ದು. ಆದರೆ ಆ ಅಧಿಕಾರಿಯನ್ನು ಬೇಕಾಗಿಯೇ ವರ್ಗ ಮಾಡಿಬಿಟ್ಟರು. ಅನಂತರ ಎಲ್ಲೆಲ್ಲಿ ಭ್ರಷ್ಟ ಅಧಿಕಾರಿಗಳಿದ್ದಾರೆ ಅವರಿಗೆ ರಕ್ಷಣೆಯನ್ನು ಕೊಡುತ್ತಿದ್ದಾರೆ. ಲ್ಯಾಂಡ್ ಆರ್ಮಿಯ ಕೆಲಸ ಕಳಪೆಯಾಗಲು ಇದೂ ಒಂದು ಮೂಲ ಕಾರಣ ಇದೆ. ಅದಕ್ಕೆ ತಾವು ಅದರ ಬಗ್ಗೆ ಲಕ್ಷ್ಯವಹಿಸಿ ಅದನ್ನು ಉಳಿಸಿಕೊಂಡು ಹೋಗಬೇಕು. ಜಿಲ್ಲಾಪಂಚಾಯಿತಿಯವರು ಮಾಡುವ ಕೆಲಸ ಬಹಳ ಚಲೋ ಆಗುತ್ತಿದೆಯೆಂದೇನಿಲ್ಲ. ಅವರೂ ಇದಕ್ಕಿಂತ ವರ್ಸ್ಟ್. ಅವರೂ ಇದೇ ರೀತಿ. ಆದರೆ ಅಲ್ಲಿ ಕಡೆಗಾದರೂ ಸರ್ಕಾರದ ಹಣವಾದರೂ ಉಳಿಯುತ್ತದೆ. ಪಗಾರವೇ ಇಲ್ಲ ಅವರಿಗೆ, ಅವರೇ ದುಡಿದು ಮಾಡಿಕೊಳ್ಳುತ್ತಾರೆ. ಆದರೆ ಒಂದು ಪ್ರಶ್ನೆ ಇದೆಯೆಂದರೆ 10 ರಿಮದ 12 ಪರ್‌ಸೆಂಟ್ ಹೆಚ್ಚಿಗೆ ಇಟ್ಟು ಎಸ್ಟಿಮೇಟನ್ನು ಮಾಡುತ್ತಾರೆ. 12 ಪರ್‌ಸೆಂಟ್‌ವರೆಗೆ ಅಬೌ ಇಡುತ್ತಾರೆ. ಮಾನ್ಯ ಕೃಷ್ಣಬೈರೇಗೌಡರು ಹೇಳಿದಂತೆ ದಿವಂಗತ ಬೈರೇಗೌಡರು ಇದ್ದಾಗ ಇಬ್ಬೊಂದು ಆಯಿತು. ಅದರ ಬಗ್ಗೆ ವಿಧಾನ ಸಭೆಯಲ್ಲಿ ಚರ್ಚೆಯಾಗಿದೆ, ಅವರು ಪಿಡಬ್ಲ್ಯೂಡಿ ರೇಟ್‌ಗಿಂತ ಹತ್ತರಿಮದ 15 ಪರ್‌ಸೆಂಟ್‌ವರೆಗೆ ಅಬಾವಿರೇಟ್ ಎಸ್ಟಿಮೇಟ್ ಮಾಡಿ ಕೆಲಸ ಪ್ರಾರಂಭ ಮಾಡುತ್ತಾರೆ. ಇದರಿಂದ ಸರ್ಕಾರದ್ದು ಎಷ್ಟು ಹಣ ಹೋಗುತ್ತದೆ

ಎಂಬ ಬಗ್ಗೆ ಸಹ ತಾವು ಪರಿಶೀಲನೆ ಮಾಡಬೇಕು. ಪಿಡಬ್ಲ್ಯೂಡಿ ರೇಟು ಎಷ್ಟು ಇದೆ, ತಮಗೆ ಹೇಳುತ್ತೇನೆ ಪಡಬ್ಲ್ಯೂಡಿ ರೇಟ್‌ನ್ನು ಇಟ್ಟು ನೀವು ಟೆಂಡರ್‌ನ್ನು ಕರೆದರೆ ತಮ್ಮ ಅಧಿಕಾರಿಗಳು ಬಿಗಿಯಾದರೆ 5 ರಿಂದ 10 ಪರ್‌ಸೆಂಟ್ ಬಿಲೋ ಮಾಡುತ್ತಾರೆ. ಈಗಂತೂ ರಸ್ತೆಯ ಕೆಲಸವನ್ನು 15 ರಿಂದ 20 ಪರ್‌ಸೆಂಟ್ ಬಿಲೋ ಮಾಡಲು ತಯಾರಿದ್ದಾರೆ, ಒಳ್ಳೆಯ ಕೆಲಸ ಮಾಡಿ ಮಾಡಲು ತಯಾರಿದ್ದಾರೆ. ಆದರೆ ನಿಮ್ಮ ಲ್ಯಾಂಡ್ ಆರ್ಮಿಯವರು 15 ಪರ್‌ಸೆಂಟ್ ಅಬೌ ಮಾಡುತ್ತಾರೆ. ಎಸ್ಟಿಮೇಟ್‌ಗಳು ಇದೆ. ತರಿಸಿ ನೋಡಿ. ಅಂದರೆ ಹಣ ಎಷ್ಟು ಹೋಯಿತು? ಇದು ನಮ್ಮ ಪ್ರಶ್ನೆ ಇರುವುದು, ಇವೆರಡನ್ನೂ ತಾವು ಪರಿಶೀಲನೆ ಮಾಡಬೇಕು.

**ಶ್ರೀ ಚಂದ್ರಕಾಂತ್ ಜಿ. ಬೆಲ್ಲದ್**: ಲ್ಯಾಂಡ್ ಆರ್ಮಿಯಲ್ಲಿ ಕೆಲವು ಕಡೆ ಒಳ್ಳೆಯ ಅಧಿಕಾರಿಗಳಿದ್ದವರು ಒಳ್ಳೆಯ ಕೆಲಸವನ್ನು ಮಾಡುತ್ತಿದ್ದಾರೆ. ಅದೇ ರೀತಿ ಧಾರವಾಡದಲ್ಲಿ ಒಳ್ಳೆಯ ಅಧಿಕಾರಿಗಳು ಇದ್ದಾರೆಂದು ಹೇಳಬೇಕಾಗುತ್ತದೆ. ಒಳ್ಳೆಯ ಕೆಲಸವನ್ನು ಮಾಡಿದ್ದಾರೆ. ಆದರೆ ಪಿಡಬ್ಲ್ಯೂಡಿ ರೇಟ್‌ಗಿಂತ ರೇಟು ಏನು ಹೆಚ್ಚಿಗೆಯಾಗುತ್ತಿದೆ ಅದನ್ನು ಮಾತ್ರ ತಾವು ಗಮನಿಸಬೇಕಾಗುತ್ತದೆ. ಏಕೆಂದರೆ ಪಿಡಬ್ಲ್ಯೂಡಿ ರೇಟ್‌ಗಿಂತ ಬಿಲೋ ರೇಟ್‌ನಲ್ಲೇ ಉತ್ತಮ ಕೆಲಸ ಮಾಡುವಂಥ ಗುತ್ತಿಗೆದಾರರು ಇದ್ದಾರೆ. ಅದಕ್ಕೆ ರೇಟ್‌ನ ದೃಷ್ಟಿಯಿಂದಲೇ ಗುಣಮಟ್ಟದ ದೃಷ್ಟಿಯಿಂದಲೂ ಸಹ ಎಲ್ಲಿ ದೂರು ಬರುತ್ತದೆ ಅಲ್ಲಿ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ.

**ಛೇರ್ಮನ್**: ಮಾನ್ಯ ಬೆಲ್ಲದ್‌ರವರು ಲ್ಯಾಂಡ್ ಆರ್ಮಿಯ ಬಗ್ಗೆ ಒಂದು ದಿವಸ ಪ್ರತ್ಯೇಕವಾಗಿ ಚರ್ಚೆ ಮಾಡೋಣ. ಈಗ ಅವರು ಮಾತನಾಡಲಿ.

**ಶ್ರೀ ಚಂದ್ರಕಾಂತ್ ಜಿ. ಬೆಲ್ಲದ್**: ಎಲ್ಲಿ ಕಳಪೆ ಕೆಲಸವಾಗಿದೆಯೋ ಅಲ್ಲಿ ಸರಿಯಾದಂಥ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಸಂಬಂಧಪಟ್ಟ ಇಂಜಿನಿಯರ್‌ಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಇಲ್ಲದಿದ್ದರೆ ಲ್ಯಾಂಟ್ ಆರ್ಮಿಯ ಬಗ್ಗೆ ಇಡೀ ರಾಜ್ಯದ ತುಂಬಾ ಕೆಟ್ಟ ಹೆಸರು ಬರುವ ಕೆಲಸವಾಗುತ್ತದೆ. ಈ ರೀತಿ ಪ್ರಚಾರವನ್ನು ಕೆಲವು ಕಡೆ ಮಾಡುವುದರಿಂದ, ಅವರ ಜಿಲ್ಲಾ ಪಂಚಾಯತಿಯಲ್ಲೂ ಲ್ಯಾಂಡ್ ಆರ್ಮಿಗೆ ಕೆಲಸ ಕೊಡಬಾರದು ಎಂದು ಹೇಳಿದ್ದಾರೆ. ಕೋಲಾರ ಜಿಲ್ಲಾಪಂಚಾಯ್ತಿಯಲ್ಲೂ ಇವರಿಗೆ ಕೆಲಸ ಕೊಡಬಾರದು ಎಂದು ನಿರ್ಣಯವನ್ನು ತೆಗೆದುಕೊಳ್ಳುತ್ತಿದ್ದಾರೆ ಇದು ಸರಿಯಲ್ಲ ಆದ್ದರಿಂದ ಆ ಇಲಾಖೆಯಲ್ಲಿ ಕಳಪೆ ಕೆಲಸ ಮಾಡಿದಂಥ ಅಧಿಕಾರಗಳ ಮೇಲೆ ಸರಿಯಾದಂಥ ಕ್ರಮ ತೆಗೆದುಕೊಳ್ಳಬೇಕು. ಜಿಲ್ಲಪಂಚಾಯಿತಿಯ ಇಂಜಿನಿಯರಿಂಗ್ ವಿಭಾಗದವರೂ ಚೆನ್ನಾಗಿ ಕೆಲಸ ಮಾಡುವುದಿಲ್ಲವೆಂಬುದೂ ನಮಗೆ ಗೊತ್ತಿದೆ ಆದ್ದರಿಂದ ಇವತ್ತು ಲ್ಯಾಂಡ್ ಆರ್ಮಿಯಲ್ಲಿ ಎಲ್ಲೆಲ್ಲಿ ದೋಷವಿದೆಯೋ ಅದರ ಬಗ್ಗೆ ಸರಿಯಾದ ಕ್ರಮ ತೆಗೆದುಕೊಳ್ಳಬೇಕು ಎಂಬುದು ಎಲ್ಲಾ ಶಾಸಕರ ಅಭಿಪ್ರಾಯವಾಗಿದೆ.

**ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)**: ಮಾನ್ಯ ಅಧ್ಯಕ್ಷರೆ, ಅವರುಗಳ ವಿಚಾರ ಧಾಟಿಯೇನಿದೆ ಅದಕ್ಕೆ ಅಡ್ಡ ಬರಲು ನಾನು ಇಷ್ಟು ಪಡುವುದಿಲ್ಲ. ನನ್ನ ಉದ್ದೇಶ ಇಷ್ಟೇ ಇತ್ತು. ಲ್ಯಾಂಡ್ ಆರ್ಮಿಯವರು ಒಳ್ಳೆಯ ಕೆಲಸವನ್ನೂ ಮಾಡುತ್ತಾರೆ, ಕಳಪೆ ಕೆಲಸವನ್ನೂ ಮಾಡುತ್ತಾರೆ. ನಮ್ಮ ತಂದೆಯವರಿದ್ದಾಗ ತಮ್ಮ ಕ್ಷೇತ್ರಕ್ಕೆ ನಾನು ಬಂದಿದ್ದೆ. ಬೈರೇಗೌಡರ ಜೊತೆ ಅಲ್ಲಿನ ರಸ್ತೆಗಳನ್ನು ನಾನು ನೋಡಿದ್ದೇನೆ. ಅವರು ಎಷ್ಟು ಸೂಕ್ಷ್ಮವಾಗಿ ಅದರ ಕಡೆಗೆ ಲಕ್ಷ್ಯವನ್ನು ಕೊಡುತ್ತಿದ್ದರು, ಅದೇ ರೀತಿ ತಾವು ಕೂಡ ಮಾಡಿದರೆ

ಲ್ಯಾಂಡ್ ಆರ್ಮಿಯೇ ಆಗಲಿ ಅಥವಾ ಇನ್ನಾವುದೇ ಆರ್ಮಿಯಾಗಲಿ ಕಳಪೆ ಕೆಲಸವನ್ನು ಮಾಡುವುದು ಬಹಳ ಕಷ್ಟವಾಗುತ್ತದೆ. ದಯವಿಟ್ಟು ಆ ಕೆಲಸವನ್ನು ತಾವು ಯುವಕರಿದ್ದೀರಿ ಮಾಡಬೇಕೆಂದು ನಾನು ಆಶಿಸುತ್ತೇನೆ.

ಶ್ರೀ ಎಸ್. ಎಸ್. ಪಾಟೀಲ್: ಶಾಸಕರು ಅದನ್ನು ದಿನಾ ಹೋಗಿ ಮಾಡಲು ಆಗುವುದಿಲ್ಲ. ಅದಕ್ಕೆ ಒಬ್ಬರು ಅಧ್ಯಕ್ಷರು ಇಲ್ಲವೆ ಉಪಾಧ್ಯಕ್ಷರೆಂದು ನೇಮಿಸುತ್ತೀರಲ್ಲಾ. ಅದರ ಇತಿಹಾಸ ತಮಗೆ ಗೊತ್ತಿಲ್ಲವೇ? ಹಾಗಿದ್ದ ಮೇಲೆ ತಾವೇಕೆ ಮುಚ್ಚಿ ಮಾತನಾಡುತ್ತೀರಿ? ಅವರುಗಳೇ ಅಧಿಕಾರಿಗಳಿಗೆ ಅಡ್ಡದಾರಿಯನ್ನು ತೋರಿಸುತ್ತಾರೆ. ತಾವು ಸುಮ್ಮನೆ ಹೇಳಬೇಡಿ.

ಶ್ರೀ ಕೆ. ಚನ್ನಿಗಪ್ಪ: ಎಷ್ಟೆಲ್ಲಾ ಶಾಸಕರು ಲ್ಯಾಂಡ್ ಆರ್ಮಿ ಸರಿಯಿಲ್ಲವೆಂದು ಹೇಳುತ್ತಾರೆ, ಇದು ಎಲ್ಲರ ಮನಸ್ಸಿನಲ್ಲೂ ಬಂದಿದೆ, ಇದು ಸತ್ಯ. ಆದರೆ, ಮೊನ್ನೆ ಸಿಎಂ ಫಂಡ್‌ನಲ್ಲಿ ರಸ್ತೆ ಮಾಡಿಸಿ ಎಂದು ರಾಜ್ಯದ ಎಲ್ಲಾ ತಾಲ್ಲೂಕಿನ ಕೆಲಸವನ್ನು ಲ್ಯಾಂಡ್ ಆರ್ಮಿಗೆ ವಹಿಸಿದ್ದಾರೆ. ಇದರ ಔಚಿತ್ಯವೇನು ಎಂಬ ಬಗ್ಗೆ ಮಾನ್ಯ ಸಚಿವರು ಹೇಳಬೇಕು.

ಶ್ರೀ ಕೃಷ್ಣಬೈರೇಗೌಡ: ಮಾನ್ಯ ಅಧ್ಯಕ್ಷರೆ, ಈ ವಿಷಯವನ್ನು ಸರ್ಕಾರ ತೀವ್ರವಾಗಿ ಪರಿಶೀಲನೆ ಮಾಡಬೇಕೆಂದು ಕೇಳಿಕೊಳ್ಳುತ್ತಾ ಕೊನೆಯದಾಗಿ ಇವತ್ತು ನಮ್ಮ ಜಿಲ್ಲೆಯಮಟ್ಟಿಗೆ ಮಾತನಾಡುವುದಾದರೆ ಕೆಲವೊಂದು ಇಲಾಖೆಗಳಲ್ಲಿ ಮೂಲಭೂತ ಸೌಲಭ್ಯಗಳನ್ನು ಒದಗಿಸತಕ್ಕ ಇಲಾಖೆಗಳಲ್ಲಿ ಸಿಬ್ಬಂದಿಯ ಕೊರತೆಯಿಂದ ಏನು ಸೌಲಭ್ಯಗಳನ್ನು ಒದಗಿಸಬೇಕಾಗಿತ್ತು ಅದನ್ನು ಸಂಪೂರ್ಣವಾಗಿ ಮುರಿದು ಬಿದ್ದಿವೆ. ಇದರಲ್ಲಿ ಎರಡು ಮೂರನ್ನು ಉದಾಹರಣೆಯ ಮೂಲಕ ಅಂಕಿಅಂಶಗಳ ಮೂಲಕ ತಮ್ಮ ಮೂಲಕ ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ಪ್ರಥಮವಾಗಿ ಪಶುಸಂಗೋಪನಾ ಇಲಾಖೆಯಲ್ಲಿ. ಕೇವಲ ಚಿಂತಾಮಣಿ ಒಂದು ತಾಲ್ಲೂಕನ್ನು ಉದಾಹರಣೆ ಕೊಡುತ್ತೇನೆ. ಪಶುಸಂಗೋಪನೆ ಅಧಿಕಾರಿಗಳೇನಿದ್ದಾರೆ, ವೆಟರ್ನರಿ ಅಧಿಕಾರಿಗಳೇನಿದ್ದಾರೆ, ಇದು ಕೋಲಾರ ಜಿಲ್ಲೆಯಮಟ್ಟಿಗೆ, ಆ ಹುದ್ದೆಗಳಲ್ಲಿ 37 ಹುದ್ದೆಗಳು ನಮ್ಮ ಜಿಲ್ಲೆಯಲ್ಲಿ ಖಾಲಿ ಇದೆ. ವೆಟರ್ನರಿ ಇನ್ಸ್‌ಪೆಕ್ಟರ್ಸ್ ಏನಿದ್ದಾರೆ ಇದರಲ್ಲಿ 51 ಹುದ್ದೆಗಳು ಖಾಲಿ ಇವೆ, ಕಾಂಪೌಂಡರ್ಸ್ ಹುದ್ದೆಯಲ್ಲಿ 49 ಹುದ್ದೆಗಳು ಖಾಲಿ ಇದೆ. ಗ್ರೂಪ್ 'ಡಿ'ನಲ್ಲಿ ಸುಮಾರು 66 ಹುದ್ದೆಗಳು ಖಾಲಿ ಇದೆ. ಈ ರೀತಿಯಾಗಿ ತೀವ್ರವಾದ ಕೊರತೆ ಇದ್ದಾಗ ಕೋಲಾರ ಹೈನುಗಾರಿಕೆಗೆ ಪ್ರಸಿದ್ಧಿ ಪಡೆದಿರುವಂಥದ್ದು ಹೈನುಗಾರಿಕೆಯನ್ನು ಅವಲಂಬಿಸಿ ಜೀವನ ಮಾಡುತ್ತಿರುವ ಜಿಲ್ಲೆಯಲ್ಲಿ ಪಶುಸಂಗೋಪನಾ ಇಲಾಖೆಯಲ್ಲಿ ಇಷ್ಟೊಂದು ತೀವ್ರವಾದ ಸಿಬ್ಬಂದಿಯ ಕೊರತೆ ಇದ್ದಾಗ ನಾವು ಯಾವ ರೀತಿಯಾಗಿ ಹೈನುಗಾರಿಕೆಯನ್ನು ಅಭಿವೃದ್ಧಿಪಡಿಸುವುದು? ಯಾವ ರೀತಿ ಸರ್ಕಾರ ಹೈನುಗಾರಿಕೆಗೆ ಸಹಾಯವನ್ನು ನೀಡುತ್ತದೆ? ಯಾವ ರೀತಿ ಜಿಲ್ಲೆ ಅಭಿವೃದ್ಧಿಯಾಗುವುದು? ಈ ರೀತಿಯ ಸಮಸ್ಯೆ ಇದೆ. ಇವರೇನು ಪಶುಸಂಗೋಪನಾ ಇಲಾಖೆಯಿಂದ ಔಷಧಿಗಳನ್ನು ಕೊಡುತ್ತಾರೆ ಅದನ್ನು ಆರು ತಿಂಗಳಿಗೆ ಒಂದು ಸಲ ಕೊಡುತ್ತಾರೆ. ಇವರು ಕೊಡುವ ಔಷಧಿಗಳು ಕೇವಲ ಎರಡು ತಿಂಗಳಿಗೆ ಸಾಕಾಗುತ್ತದೆ. ಸರ್ಕಾರದಲ್ಲಿ ಕೇವಲ ಇಬ್ಬರು ಮೂರು ಸಚಿವರನ್ನು ಬಿಟ್ಟರೆ ಬೇರೆ ಯಾರೂ ಇಲ್ಲ, ನಾವು ಬಿನ್‌ಚಿಗೋಸ್ಕರ ಮಾತನಾಡುತ್ತಿದ್ದೇವೆಂದು ನನ್ನ ಅಭಿಪ್ರಾಯ. ಏಕೆಂದರೆ, ಕಳೆದ ಬಾರಿ ಮಾತನಾಡಿದಾಗಲೂ ಉತ್ತರ ಬರಲಿಲ್ಲ, ಈ ಬಾರಿ ಕೇಳುವವರೇ ಇಲ್ಲ, ಉತ್ತರವನ್ನು ಯಾರು ಕೊಡುತ್ತಾರೋ ನನಗಂತೂ ಗೊತ್ತಿಲ್ಲ. ಆದರೂ ಈ ಸಂದರ್ಭದಲ್ಲಿ ನೊಂದು ಸರ್ಕಾರದಲ್ಲಿ

ಒತ್ತಾಯ ಮಾಡುತ್ತಿದ್ದೇನೆ, ಈ ಎಲ್ಲಾ ಸಮಸ್ಯೆಗಳನ್ನು ಸರ್ಕಾರ ಸ್ವಲ್ಪವಾದರೂ ತೀವ್ರವಾಗಿ ತೆಗೆದುಕೊಳ್ಳಬೇಕಾಗಿದೆ. ಹಾಗೆಯೇ, ಆರೋಗ್ಯ ಇಲಾಖೆಯ ಬಗ್ಗೆ ಸಹ ಉದಾಹರಣೆಯನ್ನು ಕೊಡಬಯಸುತ್ತೇನೆ. ಚಿಂತಾಮಣಿ ತಾಲ್ಲೂಕಿನಲ್ಲಿ ಮೆಡಿಕಲ್ ಆಫಿಸರ್ಸ್ ಐದು ಹುದ್ದೆಗಳು ಖಾಲಿ ಇದೆ, ಸೀನಿಯರ್ ಹೆಲ್ತ್ ಅಸಿಸ್ಟೆಂಟ್ಸ್ ಹುದ್ದೆಗಳು ಎರಡು ಖಾಲಿ ಇದೆ, ಸ್ಟಾಫ್‌ನರ್ಸ್ ನಾಲ್ಕು ಹುದ್ದೆಗಳು ಖಾಲಿ ಇದೆ. ಅಸಿಸ್ಟೆಂಟ್ಸ್ ಎರಡು ಹುದ್ದೆಗಳು ಖಾಲಿ ಇದೆ, ಮುಖ್ಯವಾಗಿ ಫಾರ್ಮಸಿಸ್ಟ್‌ಗಳು 16 ಹುದ್ದೆಗಳಲ್ಲಿ 8 ಹುದ್ದೆಗಳು ಖಾಲಿ ಇದೆ. ಇನ್ನೂ ಮುಖ್ಯವಾಗಿ ಜೂನಿಯರ್ ಹೆಲ್ತ್ ಅಸಿಸ್ಟೆಂಟ್ಸ್ ಏನಿದ್ದಾರೆ ಇದರಲ್ಲಿ 43 ಹುದ್ದೆಗಳಲ್ಲಿ 24 ಹುದ್ದೆಗಳು ಖಾಲಿ ಇದೆ. ಈ ರೀತಿಯಾದ ತೀವ್ರವಾದ ಕೊರತೆ ಇರುವಾಗ ಗ್ರಾಮೀಣ ಪ್ರದೇಶಗಳಲ್ಲಿ ಏಎನ್‌ಎಂ ಕೇಂದ್ರಗಳೆಂದು ಏನು ತೆಗೆಯುತ್ತಾರೆ ಅವುಗಳ ಅರ್ಧಕ್ಕೆ ಅರ್ಧ ಮುಚ್ಚಿಹೋಗಿವೆ. ಅದೇ ರೀತಿ ವೆಟರ್ನರಿ ಕೇಂದ್ರಗಳೇನು ಗ್ರಾಮಾಂತರ ಪ್ರದೇಶಗಳಲ್ಲಿದೆ ಅವುಗಳು ಸಂಪೂರ್ಣವಾಗಿ ಮುಚ್ಚಿಹೋಗಿವೆ. ಅಲ್ಲಿ ವೈದ್ಯಾಧಿಕಾರಿಗಳೂ ಇಲ್ಲ ಯಾರೂ ಇಲ್ಲ. ಅದಕ್ಕೆ ಕಟ್ಟಡ ಕಟ್ಟಿದ್ದಾಯಿತು ಅದು ಬಿದ್ದಿದೆ. ಅದರ ಸುತ್ತ ಗಿಡಗಳು ಬೆಳೆದುಕೊಂಡಿದೆ. ಜೇಡರ ಬಲೆ ಸುತ್ತಿಕೊಂಡಿದೆ. ಅದಕ್ಕೆ ಸರ್ಕಾರದಿಂದ ಸರಿಯಾದ ಸಿಬ್ಬಂದಿಗಳು ಇಲ್ಲ, ಔಷಧಿಗಳು ಇಲ್ಲ ನಾಮಕಾವಸ್ತೆಗೆ ನಡೆಸಬೇಕು ನಡೆಸುತ್ತಿದ್ದೇವೆ, ಈ ರೀತಿಯಾದರೆ ಹೇಗೆ? ಸರ್ಕಾರ ತನ್ನ ಕೊನೆಯ ಕೆಲವು ದಿನಗಳಿಗೆ ಬಂದಿದೆ, ಇಲ್ಲಿರುವ ಸದಸ್ಯರುಗಳ ಮತ್ತು ಮಂತ್ರಿಗಳ ಸಂಖ್ಯೆಯನ್ನು ನೋಡಿದರೆಯೇ ಗೊತ್ತಾಗುತ್ತಿದೆ ಇನ್ನೆಮ ಮನೆಗೆ ಹೋಗುವ ಸಮಯವಾಯಿತು ಎಂಬ ವಾತಾವರಣ ಸೃಷ್ಟಿಯಾಗಿದೆ. ಆದರೂ ಕೂಡ ಈ ಸಂದರ್ಭದಲ್ಲಿ ಈ ಸಮಸ್ಯೆಯನ್ನು ನಮ್ಮ ಜಿಲ್ಲೆಯ ಪರವಾಗಿ ಒತ್ತಿಹೇಳಲು ಇಚ್ಛೆಪಡುತ್ತೇನೆ. ನಾನು ಹೆಚ್ಚಿಗೆ ಸಮಯ ತೆಗೆದುಕೊಳ್ಳಲು ಹೋಗುವುದಿಲ್ಲ, ಹೆಚ್ಚಿಗೆ ಮಾತನಾಡುವ ಅಭ್ಯಾಸವೂ ಇಲ್ಲ, ಇರತಕ್ಕಂಥ ಅಂಶಗಳನ್ನು ನಾವು ಎಲ್ಲವನ್ನೂ ಹೇಳಲು ಹೋದರೆ, ಒಂದೆರಡನ್ನು ಹೇಳಿದರೆಯೇ ಸರ್ಕಾರ ಅದನ್ನು ಪೂರೈಸುವುದಿಲ್ಲ. ಇನ್ನು ನಲವತ್ತು ಹೇಳಿದರೆ ಸರ್ಕಾರ ಅದರ ಕಡೆಗೆ ನೋಡುವುದಕ್ಕೆ ಹೋಗುವುದಿಲ್ಲ. ಆದ್ದರಿಂದ ನಾನು ಕೆಲವೊಂದು ಅಂಶಗಳನ್ನು ಸರ್ಕಾರದ ಮುಂದಿಡುತ್ತಿದ್ದೇನೆ. ಇಬರಲ್ಲಿ ಅತಿ ತೀವ್ರವಾಗಿ ನಾನು ಪ್ರಥಮವಾಗಿ ಏನು ವಿಷಯಗಳನ್ನು ತೆಗೆದುಕೊಂಡಿದ್ದೆ chronic willful defaultersಗೆ ಮಾತ್ರ ಸಹಾಯ ಮಾಡಬೇಡಿ, ಗೌರವಯುತವಾಗಿ ಯಾರು ನಡೆದುಕೊಳ್ಳುತ್ತಾರೆ ಅವರಿಗೂ ಸಹ ತಾವು ಸಹಾಯ ಮಾಡಿ, ಅವರ ಹೆಸರನ್ನು ಕೇವಲ ಪಿಎಲ್‌ಡಿ ಬ್ಯಾಂಕ್ ಆಗಲಿ ಮತ್ತೊಂದು ಕಡೆಯಾಗಲಿ ನೋಟೀಸ್ ಬೋರ್ಡ್‌ನಲ್ಲಿ ಹಾಕುತ್ತಾರೆ. ಇವರು ಸಮಯಕ್ಕೆ ಸರಿಯಾಗಿ ಕಟ್ಟಿದ್ದಾರೆಂದು. ಹತ್ತು ಜನರ ಹೆಸರನ್ನು ಆ ರೀತಿ ಹಾಕುತ್ತಾರೆ. ಆ ಹೆಸರು ಮಾತ್ರ ಹಾಕಿದರೆ ಸಾಕಾಗುವುದಿಲ್ಲ. ಏಕೆಂದರೆ ಗ್ರಾಮಾಂತರ ಪ್ರದೇಶದಲ್ಲಿ ನಾವೆಲ್ಲರೂ ಬರ ಪರಿಸ್ಥಿತಿಗೆ ಬಹಳ ತೀವ್ರವಾಗಿ ಒಳಗೊಂಡಿದ್ದೇವೆ. ಆದ್ದರಿಂದ ಅವರಿಗೂ ಸರಿಯಾದ ಸೂಕ್ತವಾದ ಸಹಾಯಧನವನ್ನು ನೀಡಬೇಕೆಂದು ಇರತಕ್ಕಂಥ ಇಬ್ಬರು ಹಿರಿಯ ಮಂತ್ರಿಗಳು ಇದ್ದಾರೆ, ತಮ್ಮ ಮೂಲಕ ಅವರಲ್ಲಿ ಒತ್ತಾಯ ಮಾಡಲು ಇಚ್ಛೆಪಡುತ್ತೇನೆ. ಡ್ರಿಪ್ ಇರಿಗೇಷನ್‌ಗೆ ಸಹಾಯಧನವನ್ನೇನು ನೀಡುತ್ತಾರೆ ಅದನ್ನು ಐದು ಎಕರೆಯಿಂದ ಹತ್ತು ಎಕರೆಗೆ ಏರಿಸಬೇಕು, ಮತ್ತು ಏನು ಸಹಾಯಧನವನ್ನು ಕೊಡುತ್ತೇವೆಂದು ಆಯವ್ಯಯದಲ್ಲೂ ಸರ್ಕಾರ ಭರವಸೆ ನೀಡುತ್ತಿದೆ, ಅದನ್ನು ಎಷ್ಟು ಜನರ ಅರ್ಜಿ ಬಂದಿದೆ ಅಷ್ಟು ಜನರಿಗೂ ನೀಡತಕ್ಕ ವ್ಯವಸ್ಥೆಯನ್ನು ಮಾಡಬೇಕು ಮಾತೆತ್ತಿದರೆ ಸರ್ಕಾರ ಈ ಯೋಜನೆ, ಆ ಯೋಜನೆ ಎಂದು

ಹೇಳಿಕೊಂಡು ಬಂದ ಅರ್ಜಿಗಳಿಗೇ ಕೊಡದಿದ್ದರೆ ಏನು ಸುಖ? ಬಂದ ಅರ್ಜಿಗಳಲ್ಲಿ ಕೇವಲ ಒಂದು ಅರ್ಜಿಗೆ ಕೊಟ್ಟರೆ ಏನು ಸುಖ? ಹೆಸರಿಗೆ ಮಾತ್ರ ನಮ್ಮ ಹತ್ತಿರ ಯೋಜನೆ ಇದೆ, ಯಾವುದನ್ನು ಕೇಳಿದರೂ ಅದಕ್ಕೆ ಒಂದು ಯೋಜನೆ ಇದೆ. ಅಷ್ಟಕ್ಕೆ ಮಾತ್ರ ಆಗಬಾರದು, ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಸರ್ಕಾರ ಸಂಪೂರ್ಣ ಪ್ರಯತ್ನ ಮಾಡಬೇಕೆಂದು ಈ ಸಮಯದಲ್ಲಿ ಕೇಳಿಕೊಳ್ಳುತ್ತೇನೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ನಿಗಮದ ಕೊಳವೆ ಬಾವಿ ಸಮಸ್ಯೆಯನ್ನು ಮತ್ತೊಮ್ಮೆ ಒತ್ತಿ ಹೇಳುತ್ತೇನೆ. ಕಳೆದ ಬಾರಿಯೂ ಹೇಳಿದೆ, ಈ ಬಾರಿಯೂ ಹೇಳುತ್ತಾ ಇದ್ದೇನೆ. ಒಬ್ಬ 30 ಸಾವಿರ ರೂಪಾಯಿಗಳನ್ನು ಕೈಯಿಂದ ಕಟ್ಟಿ ಎಂದು ಹೇಳಿದರೆ ಖಂಡಿತವಾಗಿಯೂ ಆತ ಯಾವತ್ತಿಗೂ ಕಟ್ಟುವುದಿಲ್ಲ. ನೀವು ಆತನಿಗೆ ಕೊಳವೆಬಾವಿ ಕೊಟ್ಟು ನಿಷ್ಪ್ರಯೋಜನವಾಗುತ್ತದೆ. ದಯವಿಟ್ಟು, ತಾವು ಇದನ್ನು ಯಾವ ರೀತಿ ಬಗೆಹರಿಸುತ್ತೀರೋ ತಮಗೆ ಬಿಟ್ಟಿದ್ದು. ಅದನ್ನು ಬಗೆಹರಿಸಬೇಕೆಂದು ಈ ಸಂದರ್ಭದಲ್ಲಿ ಮನವಿ ಮಾಡುತ್ತೇನೆ. ತಾವು ನನಗೆ ಇಷ್ಟು ಮಾತನಾಡಲಿಕ್ಕೆ ಅವಕಾಶವನ್ನು ಮಾಡಿಕೊಟ್ಟಿದ್ದೀರಿ. ಈ ಆಯವ್ಯಯದಲ್ಲಿ ಇನ್ನೂ ಅನೇಕ ಗೊಂದಲಗಳು ಇವೆ. ಅನೇಕ ಮಾಯ ಮಾಟಗಳಿಂದ ತುಂಬಿದೆ. ಅವೆಲ್ಲವನ್ನೂ ನಾನು ಹೇಳಲಿಕ್ಕೆ ಹೋಗುವುದಿಲ್ಲ. ಸಂಕ್ಷಿಪ್ತವಾಗಿ ಕೆಲವೊಂದು ಉದಾಹರಣೆಗಳನ್ನು ಕೊಟ್ಟಿದ್ದೇನೆ. ಇನ್ನೂ ಮಾತನಾಡುತ್ತಾ ಹೋದರೆ ಸಾಕಷ್ಟು ವಿಚಾರಗಳು ಇವೆ. ನಾನು ಇನ್ನು ಹೆಚ್ಚಿನ ಸಮಯವನ್ನು ತೆಗೆದುಕೊಳ್ಳದೆ, ತಮಗೂ ಸಹ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

†**ಶ್ರೀ ಎಸ್. ಯೋಗೀಶ್ ಭಟ್ (ಮಂಗಳೂರು)**: ಸನ್ಮಾನ್ಯ ಅಧ್ಯಕ್ಷರೇ, 2004–05ನೇ ಸಾಲಿನ ಕರ್ನಾಟಕ ರಾಜ್ಯದ ಬಜೆಟ್ ಮೇಲೆ ಚರ್ಚೆಗೆ ಕೊನೆಗೂ ನನಗೆ ಅವಕಾಶ ಸಿಕ್ಕಿದ್ದಕ್ಕೆ ತಮಗೆ ವಿಶೇಷವಾಗಿ ವಂದಿಸಿ, ಕೆಲವು ಅನಿಸಿಕೆಗಳನ್ನಷ್ಟೇ ಹೇಳಲಿಕ್ಕೆ ಇಚ್ಚಿಸುತ್ತೇನೆ. ಮೊದಲನೆಯದಾಗಿ, ಚೈತನ್ಯಶೀಲ ಬಜೆಟ್ ಎಂದು ಉಲ್ಲೇಖ ಮಾಡಿದ್ದಾರೆ. ಆದರೆ, ಇಡೀ ರಾಜ್ಯದ ಜನತೆ ಇವತ್ತು ನಿಸ್ತೇಜವಾದಂಥ ದುಸ್ಥಿತಿಗೆ ಬಂದಿದೆ. ವಿಶೇಷವಾಗಿ ತೆರಿಗೆಯಿಂದ ಮಾಡಿರುವಂಥ ಆಘಾತದಿಂದಾಗಿ, ಇದರ ಬಗ್ಗೆ ಸಾಕಷ್ಟು ವಿವರಗಳನ್ನು ತಮ್ಮ ನಡುವೆ ಹಂಚಿಕೊಳ್ಳಬೇಕೆಂದು ಇದ್ದರೂ ಕೂಡ ಸಮಯಾವಕಾಶ ಇಲ್ಲದಿರುವುದರಿಂದ ಹೆಚ್ಚು ಹೇಳಲಿಕ್ಕೆ ನಾನು ಹೋಗುತ್ತಾ ಇಲ್ಲ. ಬಹುಶಃ 2003ರ ಜೂನ್ ಒಂದರಿಂದ, 1 ರಿಂದ 3 ಪರ್ಸೆಂಟ್‌ತನಕ ಸುಗ್ರೀವಾಜ್ಞೆಯ ಮೂಲಕ ಬೇಸಿಕ್ ರೇಟಿನ ಮೇಲೆ ಹೊಡೆತ ಕೊಟ್ಟಿದ್ದರು, ಆರನೇ "ಸಿ" ಚಾಪ್ಟರ ಪ್ರಕಾರ ಯಾವ ರೀತಿಯಲ್ಲಿ ಒಂದು ಪರ್ಸೆಂಟ್ ನಾನ್ ಕಲೆಕ್ಟಬಲ್ ಟ್ಯಾಕ್ಸ್ ಹಾಕಿದ್ದರು, ಬಹುಶಃ ಅದರ ಜೊತೆಯಲ್ಲಿ ಎ.ಪಿ.ಎಂ.ಸಿ. ಸೆಸ್ ಇದ್ದುದನ್ನು 1.5 ಪರ್ಸೆಂಟ್‌ಗೆ ಹೆಚ್ಚು ಹಾಕಿರುವಂಥಾದ್ದು, ಅದೇ ರೀತಿ ರೋಡ್ ಸೆಸ್‌ನ್ನು ಇನ್‌ಫ್ರಾಸ್ಟ್ರಕ್ಚರ್ ಸೆಸ್ ಎಂದು 15 ಪರ್ಸೆಂಟ್ ಅಳವಡಿಸಿರುವುದು. ಬಹುಶಃ ಇದೆಲ್ಲಾ ಅಘಾತದಿಂದಾಗಿ ಇವತ್ತು ಉದ್ದಿಮೆದಾರರು ಮತ್ತು ವಿಶೇಷವಾಗಿ ವ್ಯಾಪಾರಿಗಳು ತಲೆ ಎತ್ತುವುದಕ್ಕಾಗುತ್ತಾ ಇಲ್ಲ. ಇಂತಹ ಸ್ಥಿತಿಯಲ್ಲಿ ಚೈತನ್ಯಶೀಲ ಬಜೆಟ್ ಎಂದು ಉಲ್ಲೇಖ ಮಾಡಿದ್ದಾರೆ. ಇದು ಯಾವ ರೀತಿ ಎಂದು ನನಗೆ ಅರ್ಥವಾಗುತ್ತಾ ಇಲ್ಲ. ಟೀ ಮತ್ತು ಕಾಫಿಗೆ 13 ಪರ್ಸೆಂಟ್, ಸೋಪಿಗೆ 17 ಪರ್ಸೆಂಟ್, ಮನೆ ಸಾಮಾನಿಗೆ 13 ಪರ್ಸೆಂಟ್; ಔಷಧಿಗೆ 13 ಪರ್ಸೆಂಟ್, ವಾಹನಗಳ ಬಿಡಿ ಭಾಗಗಳ ಮೆಲೆ 16 ಪರ್ಸೆಂಟ್ ಬಹುಶಃ ಇಷ್ಟು ಮಾತ್ರವಲ್ಲ. ಪದೇ ಪದೇ ಡೀಸೆಲ್ ಮೇಲಿರುವಂಥ ತೆರಿಗೆಯನ್ನು ರದ್ದು ಮಾಡಿದ್ದಾರೆ. ಪೆಟ್ರೋಲ್ ಮೇಲೆ ಸೆಸ್ ಹಾಕಿಲ್ಲವೆನ್ನುವಂತಹ ಹೆಗ್ಗಳಿಕೆ ಮಾಡುತ್ತಿದ್ದಾರೆ ಬಹುಶಃ ನಾನು ಒಂದೇ ಮಾತಿನಲ್ಲಿ ಹೇಳುತ್ತೇನೆ. 33 ಪರ್ಸೆಂಟ್ ಟ್ಯಾಕ್ಸ್‌ನ್ನು ಪೆಟ್ರೋಲ್ ಮೇಲೆ

(†ಈ ಚಿಹ್ನೆ ಮಾನ್ಯ ಸದಸ್ಯ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲವೆಂದು ಸೂಚಿಸುತ್ತದೆ)

ಹಾಕುತ್ತಿದ್ದಾರೆ. 5 ಲಕ್ಷ ಟನ್‌ನಷ್ಟು ವಾರ್ಷಿಕವಾಗಿ ರಾಜ್ಯದಲ್ಲಿ ಉಪಯೋಗವಾಗುತ್ತಿದೆ. ಡೀಸೆಲ್ 22 ಲಕ್ಷ ಟನ್‌ನಷ್ಟು ಉಪಯೋಗವಾಗುತ್ತಿದೆ. 22 ಪರ್ಸೆಂಟ್ ತೆರಿಗೆ ಹಾಕುತ್ತಿದ್ದಾರೆ. ಇವತ್ತು ಒಂದು ಲೀಟರ್ ಪೆಟ್ರೋಲ್ ಮೇಲೆ ಸುಮಾರು 13 ರೂಪಾಯಿ ತೆರಿಗೆ ಬೀಳುತ್ತಾ ಇದೆ. ಒಂದು ಕಿಲೋಮೀಟರ್ ವಾಹನಗಳು ಹೋಗುವಾಗ ಒಂದು ಕಿಲೋಮೀಟರ್ ಮೇಲೆ ರಾಜ್ಯ ಸರ್ಕಾರಕ್ಕೆ ಒಂದು ರೂಪಾಯಿ ತೆರಿಗೆ ಕೊಡುವಂಥ ಸ್ಥಿತಿ ಬಂದಿದೆ. ಅಷ್ಟು ಮಾತ್ರವಲ್ಲ, ಒಂದು ಲೀಟರ್ ಡೀಸೆಲ್ ಮೇಲೆ ಕೂಡ, ಡೀಸೆಲ್ ವಾಹನದಲ್ಲಿ ಹೋಗುವಾಗ 75 ಪೈಸೆಯಷ್ಟು, ಒಂದು ಕಿಲೋಮೀಟರ್ ಕ್ರಮಿಸುವಾಗ ಟ್ಯಾಕ್ಸ್ ಕೊಡುವಂಥ ದುಸ್ಥಿತಿ ಬಂದಿದೆ. ಇದು ಒಂದು ಕಡೆಯಲ್ಲಾದರೆ, ಇನ್ನೊಂದು ಕಡೆ ಶಿಕ್ಷಣ ಕ್ಷೇತ್ರದಲ್ಲಿ ಅನುದಾನಿತ ಕಾಲೇಜುಗಳಿಗೆ, ಅಧ್ಯಾಪಕರುಗಳಿಗೆ ಸಂಬಳ ಬರದೇ ಹಲವು ತಿಂಗಳುಗಳಾಯಿತು. ಅನಾಥಾಶ್ರಮಗಳು ಗ್ರಾಂಟುಗಳು ಹಲವು ತಿಂಗಳುಗಳಿಂದ ಬರುತ್ತಾ ಇಲ್ಲ. ಶಾಸಕರ ಕ್ಷೇತ್ರಾಭಿವೃದ್ಧಿ ಬಗ್ಗೆ ಸಾಕಷ್ಟು ಉಲ್ಲೇಖ ಆಯಿತು. ಒಂದು ನಯಾಪೈಸೆ ಬಿಡುಗಡೆಯಾಗಿಲ್ಲ. ಬಹುಶಃ ಮಲೆನಾಡು ಅಭಿವೃದ್ಧಿ ಇದರ ಬಗ್ಗೆಯೇ ಸಾಕಷ್ಟು ವಿವರಗಳನ್ನು ಹೇಳಬಹುದು. ಈ ಸಂದರ್ಭದಲ್ಲಿ ಕೇಂದ್ರ ಸರ್ಕಾರದ ಕಡೆಯಿಂದ ಬಿಡುಗಡೆಯಾದಂಥ ಹಣವನ್ನಾದರೂ ಸಹಿತ ಉಪಯೋಗ ಮಾಡಿದ್ದಾರೆಯೇ ಎಂದರೆ ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಗೆ 380 ಕೋಟಿ ರೂಪಾಯಿ ಕೊಟ್ಟಿರುವುದರಲ್ಲಿ ಕೇವಲ 130 ಕೋಟಿ ರೂಪಾಯಿ ಮಾತ್ರ ಖರ್ಚಾಗಿದೆ. 68.5 ಕೋಟಿ ರೂ ಜಲಸಂಪನ್ಮೂಲ ಇಲಾಖೆಗೆ ಬಿಡುಗಡೆಯಾಗಿದ್ದು. ಇದರಲ್ಲಿ ಖರ್ಚಾಗಿರುವಂಥಾದ್ದು 27.24 ಕೋಟಿ ರೂಪಾಯಿಗಳು. ಬಹುಶಃ ನಾನು ಇದರ ಬಗ್ಗೆಯೇ ಸಾಕಷ್ಟು ವಿವರಗಳನ್ನು ತಯಾರು ಮಾಡಿದ್ದೆ. ಸಮಯಾವಕಾಶ ಇಲ್ಲದೇ ಇರುವುದರಿಂದ ಎಲ್ಲವನ್ನೂ ನಾನು ಹೇಳಲಿಕ್ಕೆ ಹೋಗುತ್ತಾ ಇಲ್ಲ. ರಾಜ್ಯ ಸರ್ಕಾರ ಗ್ರಾಮ ಪಂಚಾಯ್ತಿಗೆ ನೀಡಬೇಕಾದ ಬಾಕಿ ಹಣ 180.80 ಕೋಟಿ ರೂಪಾಯಿಗಳು. ಸ್ಥಳೀಯ ಸಂಸ್ಥೆಗಳಿಗೆ 11ನೇ ಹಣಕಾಸು ಆಯೋಗ ಮಂಜೂರು ಮಾಡಿದ ಹಣವನ್ನು ಕೂಡ ಗ್ರಾಮ ಪಂಚಾಯ್ತಿಗಳಿಗೆ, ಸ್ಥಳೀಯ ಸಂಸ್ಥೆಗಳಿಗೆ ನಗರಾಭಿವೃದ್ಧಿ ಇಲಾಖೆ ಕೊಟ್ಟಿಲ್ಲ. ಲೋಕೋಪಯೋಗಿ ಇಲಾಖೆಗೆ 205.5 ಕೋಟಿ ರೂನಷ್ಟು ಕೊಡಲಿಕ್ಕೆ ಬಾಕಿ ಇದೆ. ಜಲಸಂಪನ್ಮೂಲ ವಿಭಾಗಕ್ಕೆ 80.79 ಕೋಟಿ ರೂ ಬಾಕಿ ಇದೆ. ಸಣ್ಣ ನೀರಾವರಿಗೆ 143.91 ಕೋಟಿ ರೂ. ಬಾಕಿ ಇದೆ. ರಾಜ್ಯದ 177 ಪ್ರಾಥಮಿಕ ಕೃಷಿ ಮತ್ತು ಗ್ರಾಮೀಣ ಬ್ಯಾಂಕುಗಳಲ್ಲಿ ಕೆಲವು ಮಾತ್ರ ಲಾಭದಲ್ಲಿದ್ದು ಒಟ್ಟು 486 ಕೋಟಿ ರೂಪಾಯಿಗಳು ನಷ್ಟದಲ್ಲಿದೆ. 27 ಜಿಲ್ಲಾ ಪಂಚಾಯ್ತಿಗಳಲ್ಲಿ 1,470 ಲಕ್ಷ ರೂಪಾಯಿ ದುರುಪಯೋಗವಾಗಿರುವಂಥ ಮಾಹಿತಿ ಇದೆ. ಇನ್ನೊಂದು ಕಡೆಯಲ್ಲಿ ಹಳದಿ ಕಾರ್ಡಿನ ಬಗ್ಗೆ ಉಲ್ಲೇಖ ಮಾಡುತ್ತಾರೆ. 28 ಕೆ.ಜಿ. ಅಕ್ಕಿಯನ್ನು ಕೊಡುತ್ತಾರೆ, 3–50 ಪೈಸೆ ದರದಲ್ಲಿ ಕೇಂದ್ರ ಸರ್ಕಾರ ಕೊಟ್ಟರೆ, ರಾಜ್ಯಸರ್ಕಾರ ಇದನ್ನು 6–15 ಪೈಸೆಗೆ ಕೊಡುತ್ತಾ ಇದೆ. 2–65 ಪೈಸೆ ವ್ಯತ್ಯಾಸವನ್ನು ರಾಜ್ಯಸರ್ಕಾರ ಭರಿಸದೆ ಇದನ್ನು ಹೆಚ್ಚುವರಿಯಾಗಿ ಹಾಕಿ ಬಡವರಿಂದ ಈ ತರಹ ವಸೂಲು ಮಾಡುವುದು ಸರಿಯಲ್ಲವೆಂಬ ಮಾತನ್ನು ಹೇಳುತ್ತಿದ್ದೇನೆ. 7 ಕೆ.ಜಿ. ಗೋಧಿ 2.75 ಪೈಸೆಗೆ ಕೇಂದ್ರ ಸರ್ಕಾರ ಕೊಟ್ಟರೆ, 4–65 ಪೈಸೆಗೆ ರಾಜ್ಯಸರ್ಕಾರ ಕೊಡುತ್ತಾ ಇದೆ. ಅಂದರೆ 1–90 ಪೈಸೆ ಹೆಚ್ಚುವರಿಯಾಗಿ ಹೋಗುತ್ತಾ ಇದೆ. ಬಹುಶಃ ಈ ಬಜೆಟ್‌ಗೆ ಚರ್ಚೆ ಮಾಡುವಂಥ ಸಂದರ್ಭದಲ್ಲಿ, ಬಜೆಟ್ ಅಲೋಕೇಷನ್ ಬಿಟ್ಟು, ಯಾವ ರೀತಿ ಆಗುತ್ತಾ ಇದೆಯೆಂಬ ಅಂಶಗಳನ್ನು ಕೂಡ ನಮ್ಮ ಗಮನಕ್ಕೆ ತರಲಿಕ್ಕೆ ಇಚ್ಛಿಸುತ್ತೇನೆ. ಒಂದೆರಡು ಪಾಯಿಂಟ್‌ಗಳನ್ನಷ್ಟೇ ಹೇಳುವುದಕ್ಕೆ ಬಯಸುತ್ತೇನೆ.

"ಸುಮಾರು ಲಭ್ಯವಿದ್ದ ಹಣದ ಬಳಕೆ ಸಾಮರ್ಥ್ಯ ಕಳಪೆಯಾದುದರಿಂದ ಜಿಲ್ಲಾ ಪಂಚಾಯ್ತಿಗಳು 53.8 ಕೋಟಿ ರೂಪಾಯಿಗಳ ಕೇಂದ್ರದ ನೆರವನ್ನು ಕಳೆದುಕೊಂಡವು. ಆಯವ್ಯಯ ನಿಯಂತ್ರಣ ವ್ಯವಸ್ಥೆ ದುರ್ಬಲವಾಗಿತ್ತು. ವೆಚ್ಚದ ಮಾಸಿಕ ಸಮೀಕ್ಷೆಯನ್ನು ಮಾಡಿರಲಿಲ್ಲ. ಆಯವ್ಯಯದಲ್ಲಿ ಅವಕಾಶವಿಲ್ಲದೆ 77.9 ಕೋಟಿ ರೂ ವೆಚ್ಚವನ್ನು ಮಾಡಲಾಗಿತ್ತು. ಲೆಕ್ಕ ಶೀರ್ಷಿಕೆಗಳಲ್ಲಿ 531.12 ಕೋಟಿ ರೂಅನ್ನು ಆಯವ್ಯಯದಲ್ಲಿ ಅವಕಾಶವಿಲ್ಲದೆ ವೆಚ್ಚ ಮಾಡಲಾಗಿತ್ತು". ಬಹುಶಃ ಇದರಲಲಿ ಅನೇಕ ವಿವರಗಳು ಇವೆ. ನಾನು ಹೆಚ್ಚು ಉಲ್ಲೇಖ ಮಾಡಲಿಕ್ಕೆ ಹೋಗುತ್ತಾ ಇಲ್ಲ. ಈ ಸಂದರ್ಭದಲ್ಲಿ ಜಿಲ್ಲಾ ಪಂಚಾಯ್ತಿಗೆ ಸಂಬಂಧಪಟ್ಟಂತೆ ಬೇರೆ ಬೇರೆ ವಿವರಗಳು ನನ್ನ ಹತ್ತಿರ ಇದ್ದರೂ ಕೂಡ ನಾನು ಉಲ್ಲೇಖ ಮಾಡಲಿಕ್ಕೆ ಹೋಗುತ್ತಾ ಇಲ್ಲ. ವಿಶೇಷವಾಗಿ ಕರಾವಳಿ ಅಭಿವೃದ್ಧಿಗೆ ಸಂಬಂಧಪಟ್ಟಂತೆ ಪ್ರಾಧಿಕಾರವನ್ನು ಮಾಡಿ, ಏನಾದರೂ ನಮ್ಮ ಕರಾವಳಿ ಜಿಲ್ಲೆಗೇ ಒಂದು ಪ್ಯಾಕೇಜನ್ನು ಪ್ರಕಟಣೆ ಮಾಡುತ್ತಾರೆಂಬ ಆಸೆಯಲ್ಲಿದೆ, ಆದರೆ ಅದು ಆಗಿಲ್ಲ. ಅದರ ಜೊತೆಯಲ್ಲಿ, ರಘ್ತೋದ್ಯಮ, ಕರಾವಳಿ ಪ್ರವಾಸೋದ್ಯಮ ಎಲ್ಲವೂ ಸೇರಿಕೊಂಡಂತೆ ಮೀನುಗಾರಿಕೆ ನೀತಿಗೆ ಸಂಬಂಧಪಟ್ಟಂತೆ ಏನಾದರೊಂದು ಘೋಷಣೆ ಮಾಡುವುದೂ ಕೂಡ ಆಗಿಲ್ಲ. ವಿಶೇಷವಾಗಿ 60 ಸಾವಿರ ಕಿಲೋಮೀಟರ್ ಡೀಸೆಲ್ ಸಬ್ಸಿಡಿ, ಅದಕ್ಕೆ ಸಂಬಂಧಪಟ್ಟ ತೆರಿಗೆ ವಿನಾಯಿತಿಯನ್ನು ಕೊಡುವಂಥ ಘೋಷಣೆಯನ್ನು ಈ ಆಯವ್ಯಯದಲ್ಲಿ ಉಲ್ಲೇಖ ಮಾಡದಿರುವುದು ನಿರಾಶೆ ತಂದಿದೆ. ಅದನ್ನು ಮಾಡಬೇಕೆಂದು ಒತ್ತಾಯವನ್ನು ಜಿಲ್ಲೆಯ ಮೀನುಗಾರರ ಪರವಾಗಿ ನಾನು ಮಾಡುತ್ತಿದ್ದೇನೆ. ಐಸ್ ಬ್ಯಾಂಕಿನ ದುಸ್ಥಿತಿ ಯಾವ ತರಹ ಇದೆ, ಕನಿಷ್ಟ ಕೃಷಿ ಪ್ರೋಸೆಸಿಂಗ್‌ಗೆ ಸಂಬಂಧಪಟ್ಟಂತೆ, ಯೂನಿಟ್ ಮೇಲೆ ಒಂದು ರೂಪಾಯಿ ಸಬ್ಸಿಡಿಯನ್ನು ಕೊಡುವಂಥ ಯಾವ ಒಂದು ವಿಶ್ವಾಸವನ್ನು ಮುಖ್ಯಮಂತ್ರಿಗಳು ಕೊಟ್ಟಿದ್ದಾರೆ, ಅದನ್ನೂ ಕೂಡ ಅನುಷ್ಟಾನಕ್ಕೆ ತಂದಿಲ್ಲ. ಸಣ್ಣ ಕೈಗಾರಿಕೆಗಳ ಮೇಲೆ 405 ಕೋಟಿ ರೂ ಸಬ್ಸಿಡಿಯನ್ನು ಕೊಡುವಂಥಾದ್ದು, ಅದರ ಬಗ್ಗೆ ಯಾವುದೇ ಉಲ್ಲೇಖ ಮಾಡಿಲ್ಲ. ಕೋಟ್ಯಾಂತರ, ಲಕ್ಷಾಂತರ ಜನ ಯುವಕರಿಗೆ ಇವತ್ತು ಉದ್ಯೋಗಾವಕಾಶಗಳನ್ನು ಕೊಡುವಂಥ ಈ ಒಂದು ಸಣ್ಣ ಕೈಗಾರಿಕೆಗಳ ಮೇಲೆ ಸಬ್ಸಿಡಿಯನ್ನು ಬಿಡುಗಡೆ ಮಾಡುವಂಥ ನಿಟ್ಟಿನಲ್ಲಿ ಸರ್ಕಾರ ಕ್ರಮ ಕೈಗೊಳ್ಳಬೇಕೆಂಬ ಒತ್ತಾಯವನ್ನು ಮಾಡುತ್ತಿದ್ದೇನೆ. ಕೆ.ಐ.ಎ.ಡಿ.ಬಿ.ಗೆ ಸಂಬಂಧಪಟ್ಟಂತೆ ವಿಶೇಷವಾಗಿ, ಇಡೀ ರೈಲ್ ಬ್ರಾಡ್‌ಗೇಜ್‌ಗೆ ಸಂಬಂಧಪಟ್ಟಂತೆ 45 ಕೋಟಿ ರೂಪಾಯಿ ಬಿಡುಗಡೆ ಮಾಡಬೇಕಾಗಿತ್ತು. ಕಳೆದ ಮೂರು ವರ್ಷಗಳಲ್ಲಿ ಬಿಡುಗಡೆ ಮಾಡಿರುವಂಥಾದ್ದು 13 ಕೋಟಿ ರೂ ಮಾತ್ರ. ಅದನ್ನು ತಕ್ಷಣ ಬಿಡುಗಡೆ ಮಾಡಬೇಕೆಂಬ ಒತ್ತಾಯವನ್ನು ಮಾಡಿ, ನಾನು ಹೆಚ್ಚು ಮಾತನಾಡಲಿಕ್ಕೆ ಹೋಗುವುದಿಲ್ಲ. ಈ ಹಿನ್ನೆಲೆಯಲ್ಲಿ ನನ್ನ ಒಂದೇ ಒಂದು ಒತ್ತಾಯ ಇರುವಂಥಾದ್ದು. ಸೆಲ್ಫ್ ಅಸೆಸ್‌ಮೆಂಟ್‌ಗೆ ಸಂಬಂಧಪಟ್ಟು, ಕಳೆದ ಎರಡು ವರ್ಷಗಳಿಂದ, ಬಹುಶಃ ನಮ್ಮ ಶಿವಕುಮಾರ್‌ರವರಂಥ ಜವಾಬ್ದಾರಿಯುತ ಸಚಿವರ ಈ ರೀತಿಯಲ್ಲಿ ಬೇಜವಬ್ದಾರಿಯಿಂದ ಯಾವುದೇ ರೀತಿಯಲ್ಲಿ ಇದರ ಬಗ್ಗೆ ಪರಿಹಾರವನ್ನು ಕೊಡದೆ ಇರುವುದನ್ನು ನಾನು ಖಂಡಿಸುತ್ತೇನೆ. ಇದನ್ನು ಏಕೆ ಹೇಳುತ್ತೇನೆಂದರೆ, ಎರಡು ವರ್ಷಗಳಿಂದ ಇಡೀ ರಾಜ್ಯಾದ್ಯಂತ ಅನೇಕ ಹೋರಾಟಗಳಾಗುತ್ತಾ ಇದೆ. ಇದರ ಬಗ್ಗೆ ಏನಾದರೊಂದು ಪರಿಹಾರ ಕೊಡುವುದಾಗಲೀ ಅಥವಾ

ಕನ್‌ಕ್ಲೂಷನ್ ಕೊಡುವಂಥ ಒಂದು ನಿರ್ಧಾರಕ್ಕೆ ಬರಲು ಸಾಧ್ಯವಾಗುತ್ತಾ ಇಲ್ಲ. ಇಂತಹ ಒಂದು ಅಸಹನೀಯ ಸ್ಥಿತಿಯನ್ನು ಉಂಟು ಮಾಡಿರುವುದನ್ನು ನಾನು ಖಂಡಿಸುತ್ತೇನೆ. ಲ್ಯಾಂಡ್ ಅಕ್ವಿಸಿಷನ್ ಮಾಡುವ ಸಂದರ್ಭದಲ್ಲಿ ಒಂದೇ ಒಂದು ನಯಾಪೈಸೆಯನ್ನು ಖರ್ಚು ಮಾಡದೇ ಅದಕ್ಕೆ ಸಂಬಂಧಪಟ್ಟಂತೆ ಟಿ.ಡಿ.ಆರ್. ಎಂಬ ವ್ಯವಸ್ಥೆ ಏನಿದೆ, ಇದಕ್ಕೆ ಕಾನೂನು ತರಲಿಕ್ಕೆ ವಿಫಲರಾಗಿರುವುದನ್ನು ನಾನು ಈ ಸಂದರ್ಭದಲ್ಲಿ ಖಂಡಿಸುತ್ತೇನೆ. ಕಾರ್ಮಿಕ ಇಲಾಖೆಯಲ್ಲಂತೂ ಸಾಕಷ್ಟು ಗೊಂದಲ ಇದೆ. ಕಾರ್ಮಿಕ ನ್ಯಾಯಾಲಯದಲ್ಲಿ ನ್ಯಾಯಾಧೀಶರು ಇಲ್ಲ. ಇನ್ನೊಂದು ಕಡೆಯಲ್ಲಿ ಅಧಿಕಾರಿಗಳು ಇಲ್ಲ. ನಮ್ಮ ಮಂಗಳೂರಿನಲ್ಲಿ ಇತ್ತೀಚೆಗೆ ಹೆಚ್ಚುಕಡಿಮೆ ಎಂಟು ನೂರು ಮಹಿಳೆಯರು ಕಾರ್ಮಿಕ ಇಲಾಖೆಯನ್ನು ಸುತ್ತುವರಿದು ಪ್ರತಿಭಟನೆ ಮಾಡಿರುವುದನ್ನೂ ಕೂಡ ನಾನು ದಾಖಲಿಸುತ್ತಿದ್ದೇನೆ. ಬಹುಶಃ ನಾನು ಈ ಸಂದರ್ಭದಲ್ಲಿ 18 ಲಕ್ಷದ 25 ಸಾವಿರದ 75 ನಿರುದ್ಯೋಗಿಗಳು ನಮ್ಮ ರೆಕಾರ್ಡ್ಸ್‌ನಲ್ಲಿ ಏನು ದಾಖಲಾಗಿದ್ದಾರೆ ಈ ದಾಖಲಾಗಿರುವಂಥ ನಿರುದ್ಯೋಗಿಗಳಿಗೆ ಉದ್ಯೋಗಾವಕಾಶ ಕೊಡುವಂಥ ನಿಟ್ಟಿನಲ್ಲಿ ಏನಾದರೊಂದು ಭರವಸೆ ಸಿಗಲಿ ಎಂಬ ಆಸೆಯಿಂದ ನಾನು ನೋಡುತ್ತಾ ಇದ್ದೇನೆ. ನನಗೆ ಗೊತ್ತಿತ್ತು, ಕೊನೆಯದಾಗಿ ಈ ಅವಕಾಶ ಸಿಗುತ್ತೆ, ಇನ್ನೊಮ್ಮೆ ಮಾತನಾಡಲಿಕ್ಕೆ ಅವಕಾಶ ಸಿಗುವುದಿಲ್ಲವೆಂಬ ನಿಟ್ಟಿನಲ್ಲಿ ಎಲ್ಲಾ ಮಾತುಗಳನ್ನು ನಾಲ್ಕು ಗೆರೆಗಳಲ್ಲಿ ನಾನು ತರುವಂಥ ಪ್ರಯತ್ನ ಮಾಡುತ್ತೇನೆ. ವಿಶೇಷವಾಗಿ ಮಾನ್ಯ ಮುಖ್ಯಮಂತ್ರಿಗಳಿಗೆ ಸ್ಫೂರ್ತಿ ತಂದಿರುವಂಥ ಒಂದು ಪದ್ಯ, ಕೊನೆಯಲ್ಲಿ ಇದನ್ನು ರೆಫರ್ ಮಾಡಿದ್ದಾರೆ. ಕೆ.ಎಸ್. ನರಸಿಂಹಸ್ವಾಮಿಯವರು ಕವಿ ವಾಣಿ. ಮಾನ್ಯ ಅಧ್ಯಕ್ಷರೇ, ಈ ಕವನವನ್ನು ನೋಡಿದಾಗಲಂತೂ ನನಗೆ ತುಂಬ ಸ್ಫೂರ್ತಿ ಬರುತ್ತಿದೆ. ಅದನ್ನು ತಮ್ಮ ಗಮನಕ್ಕೆ ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಳುತಿಹಳು ತಾಯಿ, ಕನ್ನಡ ತಾಯಿ
ತನ್ನ ಮಕ್ಕಳ ಆಡಳಿತ ಪರಿಯ ನೋಡಿ
ಕಂದಮ್ಮಗಳ ಹಸಿವಿನ ಕಣ್ಣೀರು ಕೋಡಿ
ಕಟುಕರ ಕೈಯಲ್ಲಿ ಆಕ್ರಂದನ ಮಾಡುವ ದನಕರುಗಳ ನೋಡಿ
ಸಾಲ ಬಾಧೆಯ ಕಿರುಕುಳ ತಾಳದೆಯೇ,
ರೈತ ಬಂಧುಗಳ ಆತ್ಮಹತ್ಯೆಗಳ ರೋಧನೆ ನೋಡಿ
ಅಳುತಿಹಳು ತಾಯಿ ಕನ್ನಡ ತಾಯಿ.

ಅಳುತಿಹಳು ತಾಯಿ ಕನ್ನಡ ತಾಯಿ
ತನ್ನ ಮಕ್ಕಳ ಆಡಳಿತ ಪರಿಯ ನೋಡಿ
ಕೂಲಿಯಿಲ್ಲಾ, ಕೆಲಸವಿಲ್ಲಾ
ಕುಡಿಯಲು ನೀರಿಲ್ಲಾ, ಇರಲು ಸೂರಿಲ್ಲಾ
ಬೀಡಿ, ಅಡಕೆ, ಹಂಚು, ಮೊನು, ಸ್ವರ್ಣ
ಕಾರ್ಮಿಕರ ಅಸಹಾಯಕ ವೇದನೆ ನೋಡಿ
ಅಳುತಿಹಳು ತಾಯಿ ಕನ್ನಡ ತಾಯಿ.

ಅಳುತಿಹಳು ತಾಯಿ ಕನ್ನಡ ತಾಯಿ
ತನ್ನ ಮಕ್ಕಳ ಆಡಳಿತ ಪರಿಯ ನೋಡಿ
ಸರ್ಕಾರಿ ಕಛೇರಿಗಳಲ್ಲಿ ಕೇಳುವವರೇ ಇಲ್ಲಾ
ಆಸ್ಪತ್ರೆಗಳಲ್ಲಿ ವೈದ್ಯರು ಸಿಬ್ಬಂದಿಗಳೇ ಇಲ್ಲಾ
ನ್ಯಾಯಾಲಯಗಳಲ್ಲಿ ನ್ಯಾಯಾಧೀಶರೇ ಇಲ್ಲಾ
ಕಾರ್ಮಿಕರ ರೋಧನಕ್ಕೆ ಕವಡೆ ಕಿಮ್ಮತ್ತಿಲ್ಲಾ
ಅಳುತಿಹಳು ತಾಯಿ ಕನ್ನಡ ತಾಯಿ.

ಅಳುತಿಹಳು ತಾಯಿ ಕನ್ನಡ ತಾಯಿ
ತನ್ನ ಮಕ್ಕಳ ಆಡಳಿತ ಪರಿಯ ನೋಡಿ
ಕಡಲ ಕೊರೆತದಲ್ಲಿ ನುಂಗಿದ ಕೋಟ್ಯಾಂತರ ಬೆಲೆಯ ಕಲ್ಲನ್ನು ನೋಡಿ
ಸಬ್ಸಿಡಿ ನೆರವು ಇಲ್ಲದೇ ಮುಳುಗುವ ಉದ್ದಿಮೆಗಳ ನೋವನ್ನು ನೋಡಿ
ಭ್ರಷ್ಟರಿಗೆ ಕೊಡುವ ಪ್ರೋತ್ಸಾಹ ನೋಡಿ
ಪ್ರಾಮಾಣಿಕವಾಗಿ ಸಹಿಸುವ ಕಿರುಕುಳ ನೋಡಿ
ಅಳುತಿಹಳು ತಾಯಿ, ಕನ್ನಡ ತಾಯಿ.
ಬೇಡುವೆನು ತಾಯಿ, ನೀಡು ವರವನು
ನಿನ್ನ ಉರಿಗಣ್ಣನ್ನು ತೆರದು
ಸುಟ್ಟುಬಿಡು ನಕಲಿ, ತೆಲಗಿಗಳನ್ನು
ಅಟ್ಟಿಬಿಡು ಭ್ರಷ್ಟ, ದುಷ್ಟ ಖದೀಮರನ್ನು
ಕೊನೆಗೊಳಿಸುವ, ನಂಗಾನಾಚ್-ಆನ್‌ಲೈನ್ ಸಂಸ್ಕೃತಿಯನು
ಸಾಕು ಮಾಡು ತಾಯೇ ಬರಿಯ ಅಭಯ ಹಸ್ತವನು
ನೀಡು ಸಮೃದ್ಧಿ ನೆಮ್ಮದಿಯ ಕಮಲ ಪುಷ್ಪವನು
ಕೊಡು ಕನ್ನಡ ಕುಲಕ್ಕೆ ಹೊಸ ಮನ್ವಂತರವನ್ನು
ಕನ್ನಡ ತಾಯಿ ಭುವನೇಶ್ವರಿಯೇ ಕೃಪೆದೋರು
ಸಂಪನ್ನ, ಸಮೃದ್ಧ, ಸುಖಿ ಕನ್ನಡ ರಾಜ್ಯವನು
ನಗುನಗುತಾ ಹರಸು ನಿನ್ನ ಕರ್ನಾಟಕವನು.

ಇಷ್ಟು ಹೇಳಿ, ಅಧ್ಯಕ್ಷರು ನನಗೆ ಇಷ್ಟು ಹೊತ್ತು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಅಧ್ಯಕ್ಷರು:** ಈಗ 2004-2005ನೇ ಸಾಲಿನ ಆಯವ್ಯಯದ ಚರ್ಚೆಯು ಇಲ್ಲಿಗೆ ಮುಗಿಯಿತು. ಈಗ ಸದನವನ್ನು ಮುಂದೂಡುತ್ತಿದ್ದೇನೆ. ಸದನವು ನಾಳೆ ಬೆಳಿಗ್ಗೆ 10-30 ಗಂಟೆಗೆ ಮತ್ತೆ ಸೇರುತ್ತದೆ.

(ಸದನವು ತನ್ನ ದಿನದ ಕಾರ್ಯಕಲಾಪಗಳನ್ನು 6-15 ಗಂಟೆಗೆ ಮುಂದೂಡಲ್ಪಟು ನಾಳೆ ದಿನಾಂಕ: 12-02-04 ರಂದು ಬೆಳಿಗ್ಗೆ ಪುನಃ ಸಭೆ ಸೇರಲು ನಿರ್ಧರಿಸಿದೆ)